# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜೂನ್ 2, 2021

ಸಂಪುಟ : 48 ಸಂಚಿಕೆ : 19 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




## ಕೋವಿಡ್ ಕೇಂದ್ರಗಳಲ್ಲಿ ಮನೆಯಂತಹ ಸೌಲಭ್ಯ

### ಸ್ವಚ್ಛತೆ, ಉತ್ತಮ ಊಟ, ಚಿಕಿತ್ಸೆ ಒದಗಿಸಲು ಸಚಿವ ಭೈರತಿ ಸೂಚನೆ

ದಾವಣಗೆರೆ, ಜೂ. 1 - ಸೋಂಕಿತರನ್ನು ಕಡ್ಡಾಯವಾಗಿ ಕೋವಿಡ್ ಕೇರ್ ಸೆಂಟರ್‌ಗೆ ದಾಖಲಿಸುವ ಜೊತೆಗೆ ಅಲ್ಲಿ ಒದಗಿಸುವ ಊಟ, ಉಪಹಾರ, ವೈದ್ಯಕೀಯ ನೆರವು, ಸ್ವಚ್ಛತೆ ಸೇರಿ ಎಲ್ಲ ಸೌಲಭ್ಯಗಳು ಮನೆಗಿಂತಲೂ ಉತ್ತಮ ಗುಣಮಟ್ಟದ್ದಾಗಿರಬೇಕು ಎಂದು ನಗರಾಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಅವರು ತಿಳಿಸಿದ್ದಾರೆ.

ಕೊರೊನಾ ಕುರಿತು ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಏರ್ಪಡಿಸಲಾದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಸೋಂಕಿತರನ್ನು ಕಡ್ಡಾಯವಾಗಿ ಕೋವಿಡ್ ಕೇರ್ ಸೆಂಟರ್‌ಗೆ ದಾಖಲಿಸಬೇಕು ಎಂದು ಕಳೆದ ಬಾರಿ ಕೈಗೊಂಡ ಸಭೆಯಲ್ಲಿ ಸೂಚನೆ ನೀಡಲಾಗಿತ್ತು. ಆದರೆ ಇನ್ನೂ 2068 ಜನ ಹೋಂ ಐಸೋಲೇಷನ್‌ನಲ್ಲಿ ಇದ್ದಾರೆ ಎಂದು ಅಧಿಕಾರಿಗಳು ತಿಳಿಸಿದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಸದ್ಯ 1200 ಜನರನ್ನು ದಾಖಲಿಸಲಾಗಿದೆ. ಇಲ್ಲಿ ದೈಹಿಕ ಶಿಕ್ಷಣ ಹಾಗೂ ಯೋಗ ಶಿಕ್ಷಣ ನೀಡುವುದರ ಜೊತೆಗೆ ಸೌಲಭ್ಯ ಇರುವ ಕಡೆಗಳಲ್ಲಿ ಟಿ.ವಿ. ಸಂಪರ್ಕ ಕಲ್ಪಿಸಿ, ಮನರಂಜನೆಗೂ ವ್ಯವಸ್ಥೆ ಮಾಡಲಾಗಿದೆ. ಇನ್ನು ಮುಂದೆ ಹೋಂ ಐಸೋಲೇಷನ್‌ಗೆ ಅವಕಾಶ ನೀಡದೆ, ಕಡ್ಡಾಯವಾಗಿ ಕೋವಿಡ್ ಕೇರ್ ಸೆಂಟರ್‌ಗೆ ದಾಖಲಿಸುವ ವ್ಯವಸ್ಥೆ ಮಾಡಲಾಗಿದೆ ಎಂದರು.

ಜಿ.ಪಂ. ಸಿಇಒ ಡಾ. ವಿಜಯ ಮಹಾಂತೇಶ್ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಕಳೆದ ವಾರ 1815 ಜನ ಹೋಂ ಐಸೋಲೇಷನ್‌ನಲ್ಲಿ ಇದ್ದರು, ಇದೀಗ 739 ಜನ ಮಾತ್ರ ಇದ್ದಾರೆ, ಉಳಿದವರನ್ನು ಕೋವಿಡ್ ಕೇರ್ ಸೆಂಟರ್‌ಗಳಿಗೆ ದಾಖಲಿಸಲಾಗಿದೆ. ಗ್ರಾಮಗಳ ವ್ಯಾಪ್ತಿಯಲ್ಲಿ ಚರಂಡಿ ಸ್ವಚ್ಛತೆಗೆ ಆದ್ಯತೆ ನೀಡಲಾಗುತ್ತಿದ್ದು, ಸ್ಯಾನಿಟೈಸ್ ಕೂಡ ಮಾಡಿಸಲಾಗುತ್ತಿದೆ ಎಂದರು.

ಸಚಿವ ಭೈರತಿ ಮಾತನಾಡಿ, ಗ್ರಾಮಗಳಲ್ಲಿ ಈಗಲೂ ಜನರು ಮಾಸ್ಕ್ ಸಮರ್ಪಕವಾಗಿ ಧರಿಸುತ್ತಿಲ್ಲ, ಅಲ್ಲಲ್ಲಿ ಗುಂಪು ಗುಂಪಾಗಿ ಸಂಚರಿಸುತ್ತಿರುವುದನ್ನು ನಾನು ಗಮನಿಸಿದ್ದೇನೆ. ಹೀಗಾಗಿ ಎಲ್ಲ ಗ್ರಾ.ಪಂ. ಕೋವಿಡ್ ನಿಯಂತ್ರಣ ಕಾರ್ಯಪಡೆಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಕೋವಿಡ್ ತಡೆಗಟ್ಟುವ ಕುರಿತು ಗ್ರಾಮಗಳಲ್ಲಿ ಡಂಗುರ ಹಾಕುವ ಮೂಲಕ ಜಾಗೃತಿ ಮೂಡಿಸುವ ಕಾರ್ಯ ಆಗಬೇಕು (2ನೇ ಪುಟಕ್ಕೆ)

### ಜೂನ್ 15ರವರೆಗೆ ಲಾಕ್‌ಡೌನ್ ಇರಲಿ

ಪ್ರಸಕ್ತ ಜೂ. 7ರವರೆಗೆ ಇರುವ ಲಾಕ್‌ಡೌನ್ ಅನ್ನು ಜೂ.15ರವರೆಗೆ ವಿಸ್ತರಿಸಬೇಕು ಎಂಬುದು ಸಂಸದರು ಹಾಗೂ ಶಾಸಕರ ಒಮ್ಮತದ ಅಭಿಪ್ರಾಯವಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಸಚಿವ ಭೈರತಿ ಬಸವರಾಜ ತಿಳಿಸಿದ್ದಾರೆ.

ಬರುವ ಜೂ. 9 ಹಾಗೂ 10ರಂದು ಚನ್ನಗಿರಿಯಲ್ಲಿ ಆಕ್ಸಿಜನ್ ಘಟಕ ಹಾಗೂ ಮಾಯಕೊಂಡದಲ್ಲಿ ಕೋವಿಡ್ ಕೇರ್ ಸೆಂಟರ್ ಉದ್ಘಾಟಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ. ಜಿಲ್ಲೆಗೆ ಈಗ 17 ಸಾವಿರ ಲಸಿಕೆ ಬಂದಿದ್ದು, ಇದನ್ನು ಹೆಚ್ಚಿಸಲು ಪ್ರಯತ್ನ ನಡೆದಿದೆ. ಜನಸಂಖ್ಯೆ ಆಧಾರದ ಮೇಲೆ ಲಸಿಕೆ ತರಿಸಲು ಪ್ರಯತ್ನ ನಡೆಸಲಾಗುವುದೆಂದು ಸಚಿವರು ತಿಳಿಸಿದರು.

### 3 ನೇ ಅಲೆ ತಡೆಗಟ್ಟಲು ಸಿದ್ಧತೆ

ಕೊರೊನಾ ಪ್ರಕರಣಗಳು ಸದ್ಯ ಇಳಿಮುಖವಾಗುತ್ತಿದ್ದು, ಬರುವ ದಿನಗಳಲ್ಲಿ 3ನೇ ಅಲೆ ಬರುವ ಬಗ್ಗೆ ಹಾಗೂ ಮಕ್ಕಳನ್ನು ಹೆಚ್ಚು ಬಾಧಿಸುವ ಸಾಧ್ಯತೆಗಳ ಬಗ್ಗೆ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಹೀಗಾಗಿ ಜಿಲ್ಲೆಯಲ್ಲಿರುವ ಮಕ್ಕಳ ತಜ್ಞ ವೈದ್ಯರ ಪಟ್ಟಿಯನ್ನು ಈಗಲೇ ಸಿದ್ಧಪಡಿಸಿಕೊಳ್ಳಬೇಕು. ಜನರ ಪ್ರಾಣ ರಕ್ಷಣೆಗೆ ಆದ್ಯತೆ ನೀಡುವ ಕೆಲಸ ಆಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಹೇಳಿದ್ದಾರೆ.

ಮುಂದಿನ ವಾರ ಜಿಲ್ಲೆಯ ಎಲ್ಲ ಮಕ್ಕಳ ತಜ್ಞ ವೈದ್ಯರೊಂದಿಗೆ ಸಭೆ ನಡೆಸಿ, ಅವರಿಂದ ಸೂಕ್ತ ಸಲಹೆ, ಅಭಿಪ್ರಾಯಗಳನ್ನು ಸಂಗ್ರಹಿಸಲಾಗುವುದು.

ಮೂರನೇ ಅಲೆ ತಡೆಗಟ್ಟಲು ಅಗತ್ಯ ಯೋಜನೆ ರೂಪಿಸಿ, ಅದರಂತೆ ಮುಂಜಾಗ್ರತಾ ಕ್ರಮಗಳನ್ನು ಪ್ರಾರಂಭಿಸಬೇಕು, ಯಾವುದೇ ನ್ಯೂನತೆಗಳಿಗೆ ಅವಕಾಶ ನೀಡದೆ, ನಿರ್ಲಕ್ಷ್ಯ ತೋರದೆ ಜಿಲ್ಲಾಡಳಿತ ಸಜ್ಜಾಗಬೇಕು ಎಂದವರು ಹೇಳಿದರು.

ಪಾಲಕರೂ ಕೂಡ ಸಂಕಷ್ಟದ ಸಂದರ್ಭದಲ್ಲಿ ಮಕ್ಕಳನ್ನು ಅತ್ಯಂತ ಜಾಗರೂಕತೆಯಿಂದ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದರು.

# ಸಿಬಿಎಸ್ಇ 12ನೇ ತರಗತಿ ಪರೀಕ್ಷೆ ರದ್ದು

### ಪ್ರಧಾನಿ ಮೋದಿ ಅಧ್ಯಕ್ಷತೆಯ ಸಭೆಯಲ್ಲಿ ತೀರ್ಮಾನ

ನವದೆಹಲಿ, ಜೂ. 1 – ಕೊರೊನಾ ಹಿನ್ನೆಲೆಯಲ್ಲಿ ಸಿಬಿಎಸ್ಇ 12ನೇ ತರಗತಿ ಪರೀಕ್ಷೆ ರದ್ದುಗೊಳಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಸಭೆಯ ನಂತರ ಹೇಳಿಕೆ ನೀಡಿರುವ ಪ್ರಧಾನಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದರಿಂದ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರಲ್ಲಿದ್ದ ಉದ್ವಿಗ್ನತೆ ಅಂತ್ಯವಾಗಲಿದೆ ಎಂದಿದ್ದಾರೆ.

ಕಾಲಮಿತಿಯಲ್ಲಿ ಸ್ಪಷ್ಟ ವಸ್ತುನಿಷ್ಠ ಮಾನದಂಡಗಳೊಂದಿಗೆ 12ನೇ ತರಗತಿ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಲು ಕ್ರಮ ತೆಗೆದುಕೊಳ್ಳಲು ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಹಲವಾರು ರಾಜ್ಯಗಳಲ್ಲಿ ಕೊರೊನಾ ಸೋಂಕು ಹೆಚ್ಚಾಗಿರುವುದು ಹಾಗೂ ಭವಿಷ್ಯದ ಬಗ್ಗೆ ಹೆಚ್ಚಿನ ಕಳವಳದ ಹಿನ್ನೆಲೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ವಿದ್ಯಾರ್ಥಿಗಳ ಆರೋಗ್ಯ ಹಾಗೂ ಸುರಕ್ಷತೆಯೋ ಅತ್ಯುನ್ನತ ಪ್ರಾಮುಖ್ಯತೆಯಾಗಿದ್ದು, ಈ ಬಗ್ಗೆ ಯಾವುದೇ ಹೊಂದಾಣಿಕೆ ಸಾಧ್ಯವಿಲ್ಲ. ಇದರೊಂದಿಗೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರಲ್ಲಿನ ಆತಂಕ ನಿವಾರಣೆಯಾಗಬೇಕು. ಇಂತಹ ಒತ್ತಡದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಬಲವಂತಪಡಿಸಬಾರದು ಎಂದು ಪ್ರಧಾನಿ ಹೇಳಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ವಲಯಕ್ಕೆ ಸಂಬಂಧಿಸಿದ ಎಲ್ಲರೂ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರ ಬಗ್ಗೆ ಸಂವೇದನೆ ತೋರಬೇಕಿದೆ ಎಂದೂ ಪ್ರಧಾನಿ ತಿಳಿಸಿದ್ದಾರೆ.

ಸಭೆಯಲ್ಲಿ ಅಧಿಕಾರಿಗಳು ಇದುವರೆಗೂ ಪರೀಕ್ಷೆ ಕುರಿತು ನಡೆಸಲಾದ ವಿಸ್ತೃತ ಸಮಾಲೋಚನೆಗಳ ವಿವರ ನೀಡಿದರು. ರಾಜ್ಯ ಸರ್ಕಾರಗಳೂ ಸೇರಿದಂತೆ ಸಂಬಂಧಿಸಿದ ಎಲ್ಲರ ಅಭಿಪ್ರಾಯಗಳನ್ನು ಮಂಡಿಸಿದರು. (3ನೇ ಪುಟಕ್ಕೆ)

### ರಾಜ್ಯ ಪಠ್ಯಕ್ರಮದ ಬಗ್ಗೆ ಶೀಘ್ರವೇ ತೀರ್ಮಾನ

ಬೆಂಗಳೂರು, ಜೂ. 1 – ಕೇಂದ್ರ ಸರ್ಕಾರ ಸಿಬಿಎಸ್ಇ 12ನೇ ತರಗತಿ ಪರೀಕ್ಷೆ ರದ್ದುಗೊಳಿಸಿರುವ ಹಿನ್ನೆಲೆಯಲ್ಲಿ, ರಾಜ್ಯದ ಮಂಡಳಿ ಪರೀಕ್ಷೆಗಳ ಕುರಿತು ಶೀಘ್ರದಲ್ಲೇ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಶಿಕ್ಷಣ ಸಚಿವ ಸುರೇಶ್ ಕುಮಾರ್ ಹೇಳಿದ್ದಾರೆ. (3ನೇ ಪುಟಕ್ಕೆ)

### ಸಿಐಎಸ್‌ಸಿಇ 12ನೇ ತರಗತಿ ಪರೀಕ್ಷೆ ರದ್ದು

ನವದೆಹಲಿ, ಜೂ. 1 – ಕೊರೊನಾ ಹಿನ್ನೆಲೆಯಲ್ಲಿ ಸಿ.ಐ.ಎಸ್.ಸಿ.ಇ. 12ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸಿರುವುದಾಗಿ ಅದರ ಕಾರ್ಯದರ್ಶಿ ಗೆರ್ರಿ ಆರಥೂನ್ ತಿಳಿಸಿದ್ದಾರೆ.

ಪರೀಕ್ಷೆಗಳನ್ನು (3ನೇ ಪುಟಕ್ಕೆ)

## ರಾಜ್ಯಕ್ಕೆ ನೀಡಿದ ಬ್ಲಾಕ್ ಫಂಗಸ್ ಔಷಧಿ ಸಾಲದು: ಸುಧಾಕರ್

ಬೆಂಗಳೂರು, ಜೂ. 1 - ಬ್ಲಾಕ್ ಫಂಗಸ್ ಔಷಧಿ 1300 ವಯಲ್ಸ್ ನೀಡಿದ್ದು, ಅದು ರಾಜ್ಯದ ರೋಗಿಗಳಿಗೆ ಸಾಕಾಗುವುದಿಲ್ಲ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬ್ಲಾಕ್ ಫಂಗಸ್ ಔಷಧಿ ಕೊರತೆ ನೀಗಿಸಲು ನಾನು ಕೇಂದ್ರ ಸಚಿವ ಸದಾನಂದಗೌಡರ ಜೊತೆ ಪ್ರತಿದಿನ ಮಾತಾಡುತ್ತಾ ಇದ್ದೇನೆ. ನಾಲ್ಕು ಹಾಗೂ ಐದನೇ ತಾರೀಖಿನ ವೇಳೆಗೆ ಹೆಚ್ಚು ಕಳುಹಿಸುವುದಾಗಿ ಹೇಳಿದ್ದಾರೆ ಎಂದರು.

ಬ್ಲಾಕ್ ಫಂಗಸ್ ಕಣ್ಣಿಗೆ ತಲುಪಿದ ಮೇಲೆ ಕಣ್ಣು ತೆಗೆಯಲೇ ಬೇಕಾಗುತ್ತದೆ. ಅದು ಮಿದುಳಿಗೆ ಹೋಗದಂತೆ (3ನೇ ಪುಟಕ್ಕೆ)

## ಲಸಿಕೆ ಪಡೆದವರು ಮಾತ್ರ ಸೇವೆಗೆ ಬಳಕೆ :ಸಚಿವ ಸವದಿ

ಬೆಂಗಳೂರು, ಜೂ. 1 - ಕೊರೊನಾ ಲಸಿಕೆ ಪಡೆದಂತಹ ಚಾಲಕರು ಮತ್ತು ನಿರ್ವಾಹಕರನ್ನು ಮಾತ್ರ ಸೇವೆ ಬಳಸಿಕೊಳ್ಳಲಾಗುವುದು ಎಂದು ಸಾರಿಗೆ ಇಲಾಖೆ ಹೊಣೆ ಹೊತ್ತಿರುವ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ತಿಳಿಸಿದ್ದಾರೆ.

ಇಲಾಖೆಯ ಸಮಾರಂಭದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ನೌಕರರು ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಇಂತಹ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಲಾಕ್‌ಡೌನ್ ತೆರವುಗೊಂಡ ನಂತರ ಸಾರಿಗೆ ಸಂಸ್ಥೆ ಸೇವೆಯನ್ನು ಎಂದಿನಂತೆ ಸಾರ್ವಜನಿಕರಿಗೆ (3ನೇ ಪುಟಕ್ಕೆ)

## ಅನಾರೋಗ್ಯದಿಂದ ಸಿದ್ದರಾಮಯ್ಯ ಆಸ್ಪತ್ರೆಗೆ



ಬೆಂಗಳೂರು, ಜೂ. 1 - ಅನಾರೋಗ್ಯದಿಂದ ಬಳಲುತ್ತಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಗರದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ಹುಬ್ಬಳ್ಳಿ ಮತ್ತು ಬಾಗಲಕೋಟೆ ಜಿಲ್ಲಾ ಪ್ರವಾಸ ಮುಗಿಸಿ, ನಗರಕ್ಕೆ ಹಿಂತಿರುಗುತ್ತಿದ್ದಂತೆ ಅವರಿಗೆ ಜ್ವರ ಕಾಣಿಸಿಕೊಂಡಿದೆ. (2ನೇ ಪುಟಕ್ಕೆ)

## 178 ಪಾಸಿಟಿವ್, 436 ಗುಣಮುಖ, 5 ಸಾವು

ದಾವಣಗೆರೆ, ಜೂ.1- ಜಿಲ್ಲೆಯಲ್ಲಿ ಮಂಗಳವಾರ 178 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು, ಐವರು ಸಾವನ್ನಪ್ಪಿದ್ದಾರೆ. 436 ಜನರು ಗುಣಮುಖರಾಗಿದ್ದಾರೆ ಎಂದು ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಲಾಗಿದೆ. (3ನೇ ಪುಟಕ್ಕೆ)

## ಸಿಎಂ ಗಾದಿಗಾಗಿ ಬಿಜೆಪಿಯಲ್ಲಿ ಕಸರತ್ತು

### ನಾಯಕತ್ವ ತೀರ್ಮಾನ ಷಾ ಹೆಗಲಿಗೆ: ವಿಜಯೇಂದ್ರ ದಿಢೀರ್ ದೆಹಲಿ ದೌಡು

ಬೆಂಗಳೂರು, ಜೂ. 1 - ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಗೆ ಕರ್ನಾಟಕದ ಪಕ್ಷದ ನಾಯಕತ್ವದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಪ್ರಧಾನಿ ನರೇಂದ್ರ ಮೋದಿ ನೀಡಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಉಳಿಸಲು ಮತ್ತು ಇಳಿಸಲು ಬಿಜೆಪಿಯ ಶಾಸಕರು ತೆರೆಮರೆ ಕಸರತ್ತು ನಡೆಸಿದ್ದಾರೆ.

ಸಚಿವ ಸಿ.ಪಿ. ಯೋಗೇಶ್ವರ್ ಹಾಗೂ ಪಕ್ಷದ ಶಾಸಕರು ನಾಯಕತ್ವದ ವಿರುದ್ಧವೇ ಸಾರ್ವಜನಿಕವಾಗಿ ಹೇಳಿಕೆ ನೀಡುವ ಮಟ್ಟಕ್ಕೆ ಬಂದಿದ್ದಾರೆ.

ಇದರ ಮಧ್ಯೆ ಪಕ್ಷದ ಶಾಸಕಾಂಗ ಸಭೆ ಕರೆಯುವಂತೆ ಪಕ್ಷದ ಸದಸ್ಯರ ಸಹಿ ಸಂಗ್ರಹ ಆರಂಭಿಸಿದ್ದು, ಸಹಿ ಪತ್ರವನ್ನು ಪಕ್ಷದ





ರಾಷ್ಟ್ರೀಯ ಅಧ್ಯಕ್ಷರಿಗೆ ನೀಡಲು ಮುಂದಾಗಿದ್ದಾರೆ.

ಕಳೆದ ಆರು ತಿಂಗಳಲ್ಲೇ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಪಕ್ಷದಲ್ಲಿ ತೆರೆಮರೆಯಲ್ಲೇ ಕಸರತ್ತು ನಡೆಯುತ್ತಿದೆ.

ನಾಯಕತ್ವಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲು ದೆಹಲಿ ನಾಯಕರು ಮುಖ್ಯಮಂತ್ರಿಯವರಿಗೆ ಎರಡು ಬಾರಿ ಕರೆ ನೀಡಿದ್ದರೂ, ಅವರು ಕೊರೊನಾ ನೆಪವೊಡ್ಡಿ ಪ್ರಯಾಣ ಬೆಳೆಸಲಿಲ್ಲ. ಆದರೆ ಅವರ ಪರವಾಗಿ ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಹಾಗೂ ತಮ್ಮ ಪುತ್ರ ವಿಜಯೇಂದ್ರ ಅವರನ್ನು ಒಮ್ಮೆ ದೆಹಲಿಗೆ ಕಳುಹಿಸಿದ್ದರು.

ಪ್ರಧಾನಿಯವರು, ಗೃಹ ಸಚಿವರಿಗೆ ಅಧಿಕಾರ ನೀಡುತ್ತಿದ್ದಂತೆ ವಿಜಯೇಂದ್ರ ಇಂದು ದಿಢೀರನೆ ಮುಂಜಾನೆಯೇ ದೆಹಲಿಗೆ ಪ್ರಯಾಣಿಸಿದ್ದಾರೆ.

ಸಿ.ಪಿ. ಯೋಗೇಶ್ವರ್ ಅವರನ್ನು ಸಂಪುಟದಿಂದ ಕೈಬಿಡಲು ಮುಖ್ಯಮಂತ್ರಿಯವರಿಗೆ ಅನುಮತಿ ನೀಡಬೇಕೆಂದು ಮನವಿ ಮಾಡಲು ವಿಜಯೇಂದ್ರ ವರಿಷ್ಠರನ್ನು ಭೇಟಿಯಾಗುತ್ತಿದ್ದಾರೆ ಎಂದು ಅವರ ಬೆಂಬಲಿಗರು ಹೇಳಿಕೊಳ್ಳುತ್ತಿದ್ದಾರೆ. ವಿರೋಧಿ ಗುಂಪಿನವರು ವಿಜಯೇಂದ್ರ ಪ್ರವಾಸವನ್ನೇ ಬೇರೆ ರೀತಿಯಲ್ಲಿ ಬಣ್ಣಿಸುತ್ತಿದ್ದಾರೆ. (2ನೇ ಪುಟಕ್ಕೆ)

## ಖರೀದಿ ಕೇಂದ್ರ: ಲಾಕ್‌ಡೌನ್ ಹಣಕಾಸನ್ನೂ ಪರಿಗಣಿಸಬೇಕು



ದಾವಣಗೆರೆ, ಮೇ 31 - ಭತ್ತದ ಖರೀದಿ ಕೇಂದ್ರ ತೆರೆಯಲು ಕೊರೊನಾ ಪರಿಸ್ಥಿತಿ ಹಾಗೂ ಲಾಕ್ ಡೌನ್‌ನಿಂದ ಉಂಟಾದ ಹಣಕಾಸು ವಿಷಯಗಳನ್ನೂ ಪರಿಗಣಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಇಂಗಿತ ವ್ಯಕ್ತಪಡಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರಿಗೆ ಭತ್ತದ ಖರೀದಿ ಕೇಂದ್ರ ಸ್ಥಾಪಿಸುವ ಕುರಿತು ಪ್ರಶ್ನಿಸಿದಾಗ, ಈ ಬಗ್ಗೆ ಆಹಾರ ಸಚಿವರ ಜೊತೆ ಮಾತನಾಡಿರುವುದಾಗಿ ಹೇಳಿದರು.

ಕೊರೊನಾ ಸಂದರ್ಭದಲ್ಲಿ ಹೆಚ್ಚು ಸಮಯವನ್ನು ಸೋಂಕು ನಿವಾರಣೆಗೆ ಮೀಸಲಿಡಲಾಗುತ್ತಿದೆ. ರೈತರ ಬಗ್ಗೆಯೂ ಕಾಳಜಿ ಇದೆ. ಏನು ಮಾಡಬೇಕು ಎಂಬುದನ್ನು ಗಮನಿಸುತ್ತಿದ್ದೇವೆ ಎಂದರು.

ಆರ್ಥಿಕ ಪರಿಸ್ಥಿತಿಗಳನ್ನು ಮನಗಾಣಬೇಕಿದೆ. ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರದ ಬೊಕ್ಕಸಕ್ಕೆ ಬರುವ ಹಣ ಇವೆಲ್ಲವನ್ನೂ ಗಮನಿಸಿ ನಿರ್ಧರಿಸಬೇಕಿದೆ ಎಂದವರು ಹೇಳಿದರು.

ಈಗಾಗಲೇ ರೈತರು ಬೆಳೆದ ಬೆಳೆ ಮಾರಾಟವಾಗಿ ಖಾಲಿಯಾಗುತ್ತಿದೆ. ಖರೀದಿ ಕೇಂದ್ರ ತೆರೆಯುವುದು ವಿಳಂಬವಾಗುತ್ತಿದೆ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ರೈತರ ಬೆಳೆ ಖಾಲಿ ಆದರೆ ಮತ್ತೆ ಬೆಳೆಯಲ್ಲವಾ? ಮತ್ತೆ ಬರುವ ಬೆಳೆಗೆ ಬೇಡವಾ? ಎಂದು ಕೇಳಿದರು.

**ಪಿಕ್‌ನಿಕ್ ಸಚಿವನಲ್ಲ :** ಪಿಕ್‌ನಿಕ್‌ಗೆ ಬರುವ ಹಾಗೆ ದಾವಣಗೆರೆಗೆ ಬಂದು ಹೋಗುತ್ತಿರುವ ಆರೋಪವನ್ನು ತಳ್ಳಿ ಹಾಕಿರುವ (3ನೇ ಪುಟಕ್ಕೆ)

## 15 ದಿನಗಳಲ್ಲಿ ಆಕ್ಸಿಜನ್ ಜನರೇಟರ್ ಪ್ಲಾಂಟ್ ಕಾರ್ಯಾರಂಭ

### ಹರಿಹರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್

ಹರಿಹರ, ಜೂ.1- ನಗರದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ರೋಗಿಗಳ ಚಿಕಿತ್ಸೆಗಾಗಿ ಇನ್ನು 15 ದಿನಗಳಲ್ಲಿ ಆಕ್ಸಿಜನ್ ಜನರೇಟರ್ ಪ್ಲಾಂಟ್ ಕಾರ್ಯಾರಂಭವಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದ್ದಾರೆ.

ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ್ ಅವರು ತಮ್ಮ ತಂದೆ ದಿವಂಗತ ಜಿ.ಎಂ. ಮಲ್ಲಿಕಾರ್ಜುನಪ್ಪ ಮತ್ತು ಶ್ರೀಮತಿ ಹಾಲಮ್ಮನವರ ಸ್ಮರಣಾರ್ಥ ಸುಮಾರು 60 ಲಕ್ಷ ರೂಪಾಯಿ ವೆಚ್ಚದಲ್ಲಿ ಆಕ್ಸಿಜನ್ ಜನರೇಟರ್ ಪ್ಲಾಂಟ್ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ, ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಹರಿಹರ, ಹರಪನಹಳ್ಳಿ, ಚಿತ್ರದುರ್ಗ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸುಮಾರು 1.80 ಕೋಟಿ ರೂ.ಗಳ ವೆಚ್ಚದಲ್ಲಿ ಆಕ್ಸಿಜನ್ ಜನರೇಟರ್ ಪ್ಲಾಂಟನ್ನು ತಮ್ಮ ತಂದೆ, ತಾಯಿ ಹೆಸರಿನಲ್ಲಿ ಮಾಡಿಸಲು ಮುಂದಾಗಿ, ತಮ್ಮ ಸಹೋದರ ಲಿಂಗರಾಜ್ ಅವರ ಪುತ್ರ ಜಿ.ಎಲ್. ರಾಜೀವ್ ಮೂಲಕ ಪೂಜೆ ಸಲ್ಲಿಸಿ ಕಾಮಗಾರಿಗೆ ಚಾಲನೆ ನೀಡಿದ್ದಾರೆ. ಸರ್ಕಾರದ ವತಿಯಿಂದ ಅವರ ಕುಟುಂಬದವರಿಗೆ ಅಭಿನಂದನೆಗಳು ಎಂದು ಅವರು ಹೇಳಿದರು.



ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ರಾಜ್ಯದ ಆಡಳಿತವನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಇನ್ನೂ ಎರಡು ವರ್ಷಗಳ ಕಾಲ ಯಾವುದೇ ಕಾರಣಕ್ಕೂ ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡುವ ಮಾತಿಲ್ಲ. ಮುಂದಿನ ಚುನಾವಣೆ ಸಹ ಅವರ ಮುಖಂಡತ್ವದಲ್ಲಿ ನಡೆಯುತ್ತದೆ. ರಾಜ್ಯ ಬಿಜೆಪಿ ಉಪಾಧ್ಯಕ್ಷ ವಿಜಯೇಂದ್ರ ದೆಹಲಿ ಪ್ರಯಾಣ ಬೆಳೆಸಿರುವ ಮಾಹಿತಿ ನನಗೆ ಇಲ್ಲ ಎಂದು ಸಚಿವರು ಹೇಳಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಆಕ್ಸಿಜನ್ ಜನರೇಟರ್ ಪ್ಲಾಂಟ್ ಕಾಮಗಾರಿಗೆ ತನ್ನ ಸಹೋದರ ಲಿಂಗರಾಜ್ ಅವರ ಪುತ್ರ ಜಿ.ಎಲ್. ರಾಜೀವ್ ಅವರ ಕೈಯಲ್ಲಿ ಪೂಜೆ ಮಾಡಿಸಿ ಚಾಲನೆ ನೀಡಲಾಗಿದೆ. ಪಶ್ಚಿಮ ಬಂಗಾಳದ ಕಂಪನಿಯ ಜೊತೆಗೆ ಲಿಂಗರಾಜ್ ಮಾತನಾಡಿ ಈ ವ್ಯವಸ್ಥೆಗೆ ಮುಂದಾಗಿದ್ದು, ಈಗ ಸದ್ಯದಲ್ಲಿ ಹರಿಹರ, ಹರಪನಹಳ್ಳಿ, ಚಿತ್ರದುರ್ಗ ನಗರಗಳಲ್ಲಿ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಬೇರೆ ನಗರಗಳಿಂದ ಬೇಡಿಕೆ ಬಂದರೆ ಅಲ್ಲಿಯೂ ಕೂಡ ಪ್ಲಾಂಟ್ ಸಿದ್ಧಪಡಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯಪ್ಪ, (3ನೇ ಪುಟಕ್ಕೆ)

## ಯುವಕರಿಗೆ ಸರ್ಕಾರ ಲಸಿಕೆ ನೀಡದಿರುವುದು ದುರಂತ

ಹರಪನಹಳ್ಳಿ, ಜೂ. 1- ದೇಶ ಕಟ್ಟುವಲ್ಲಿ ಯುವಕರ ಪಾತ್ರ ಬಹು ಮುಖ್ಯವಾಗಿದ್ದು, ಸರ್ಕಾರ 18 ವರ್ಷದ ಯುವಕರಿಗೆ ಕೋವಿಡ್ ಲಸಿಕೆ ನೀಡದೇ ಇರುವುದು ದುರಂತ ಎಂದು ಕೆಪಿಸಿಸಿ ಮಾಧ್ಯಮ ವಿಶ್ಲೇಷಕಿ ಎಂ.ಪಿ. ವೀಣಾ ಮಹಾಂತೇಶ್ ಹೇಳಿದರು.

ಪಟ್ಟಣದ ಆಚಾರ್ಯ ಬಡಾವಣೆಯಲ್ಲಿರುವ ತಮ್ಮ ಕಛೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋವಿಡ್ 2ನೇ ಅಲೆಯಲ್ಲಿ ಸರ್ಕಾರ 45 ವರ್ಷ ಮೇಲ್ಪಟ್ಟವರಿಗೆ ಮಾತ್ರ ಲಸಿಕೆಯನ್ನು ನೀಡಿದ್ದು, 18 ವರ್ಷದ ವಯೋಮಾನದ ಯುವಕರಿಗೆ ಲಸಿಕೆ ನೀಡುವಲ್ಲಿ ಸರ್ಕಾರ ವಿಫಲವಾದ ಹಿನ್ನೆಲೆಯಲ್ಲಿ ಯುವಕರೇ ಈ ಕೊರೊನಾ ಮಹಾಮಾರಿಗೆ ಬಲಿಯಾಗಿದ್ದಾರೆ ಎಂದರು.



ಕಾಂಗ್ರೆಸ್ ಸರ್ಕಾರ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ ನಂತರದಲ್ಲಿಯೂ ಜನಪರ ಯೋಜನೆಗಳನ್ನು ಜಾರಿಗೆ ತರುವುದರ ಮೂಲಕ ಜನ ಸಾಮಾನ್ಯರ ಜೊತೆಗೆ ಇದೆ ಎಂಬುದು ಸಾಬೀತಾಗಿದ್ದು, ಇದುವರೆಗೆ ಶೇ. 5 ರಷ್ಟು ಲಸಿಕೆ ನೀಡುವ ಕಾರ್ಯ ಮುಗಿದಿದ್ದು, ಇನ್ನೂ ಶೇ. 95 ರಷ್ಟು ಲಸಿಕೆ ಹಾಕುವುದು ಬಾಕಿ ಇದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ನಿರ್ದೇಶನದಂತೆ ನಗರ (2ನೇ ಪುಟಕ್ಕೆ)

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಶ್ರೀ ಜಿತೇಂದ್ರ ಕುಮಾರ್ ಇಜರಿ, ಶ್ರೀಮತಿ ಮಮತ ಇಜರಿ, ಇವರ 29ನೇ ವಿವಾಹ ವಾರ್ಷಿಕೋತ್ಸವ ಹಾಗೂ ಕುಶಲ್ ಇಜರಿ ಇವರ ಹುಟ್ಟುಹಬ್ಬದ ಪ್ರಯುಕ್ತ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಕಾರು ಮಾರಾಟಕ್ಕೆ ಬೇಕಿದೆ**
Volkswagen Vento
ಅಥವಾ Skoda Rapid.
8 ವರ್ಷದೊಳಗಿನ ಯಾವುದೇ ಕಂಪನಿಯ ಕಾರುಗಳು
ಕಿರಣ್ ಬೂಸ್ನೂರ್ : 97315-63409
Contact for Used Cars Buying & Selling

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇಔಟ್‌ನಲ್ಲಿ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x55 East, 40ಅಡಿ ರೋಡಿಗಿದೆ, 30x50 North, 30x40 East, 30x40 west, 70x40 Corner, 40 ಅಡಿರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
9916612110

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಕೊಟ್ಟೂರೇಶ್ವರ ಬಡಾವಣೆ ನಿಟ್ಟುವಳ್ಳಿಯಲ್ಲಿ ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ, ಕಮೋಡ್ ಸಿಸ್ಟಂ, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ /ಲೀಸ್‌ಗೆ ಇದೆ.
96634 65543

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ 40x70 East, 60x40 West, 30x50 west, 30x48 East, 30x40 West, 40 ಅಡಿ ರೋಡಿಗಿದೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
9916612110

**ಮನೆ ಬಾಡಿಗೆಗೆ ಇದೆ**
# 3680/ ಎ, ಎಂ.ಸಿ.ಸಿ. "ಬಿ" ಬ್ಲಾಕ್, 1ನೇ ಫ್ಲೋರ್, 11ನೇ ಮೇನ್, 5ನೇ ಕ್ರಾಸ್, ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
98456 92504

**ಕೃಷಿ ಟಾರ್ಪಾಲಿನ್**
ತಯಾರಕರು :
ಕೃಷಿ ಆಗ್ರೋ ಟೆಕ್ಸ್
ಇಂಡಸ್ಟ್ರೀಯಲ್ ಏರಿಯಾ, ಹನಗವಾಡಿ
ಫೋ. : 91082 11555

**2 ಬೆಡ್‌ರೂಂ ಮನೆ ಬೇಕಾಗಿದೆ**
ಪೂರ್ವ ಮತ್ತು ಉತ್ತರ ದಿಕ್ಕಿನ ಮನೆ ವಿನೋಬನಗರ, ದೇವರಾಜ್ ಅರಸ್ ಬಡಾವಣೆ, ನಿಜಲಿಂಗಪ್ಪ ಬಡಾವಣೆ, ಹೊಂಡದ ಸರ್ಕಲ್‌ನಲ್ಲಿ ಬೇಕಾಗಿದೆ. ಬಾಡಿಗೆಗೆ ಅಥವಾ ಮಾರಾಟಕ್ಕೆ. ಸಂಪರ್ಕಿಸಿ
74112 11032

**ಬೇಕಾಗಿದ್ದಾರೆ**
1) ಕಾಲ್‌ಸೆಂಟರ್- ಗರ್ಲ್
2) ಡೆಲಿವರಿ-ಬಾಯ್ಸ್- (ಸೈಕಲ್ ಇದ್ದವರಿಗೆ ಆದ್ಯತೆ)
3) ಸೇಲ್ಸ್ ಬಾಯ್ಸ್ - ಕಾಂಟ್ಯಾಕ್ಟ್
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮಾ
1ನೇ ಫ್ಲೋರ್, ಕಾಲೇಜ್ ರೋಡ್, ಪಿ.ಜೆ. ಬಡಾವಣೆ, ಡಾ|| ಆಲೂರು ಮಂಜುನಾಥ್ ಹಾಸ್ಪಿಟಲ್ ಪಕ್ಕ, ದಾವಣಗೆರೆ.
ಮೊ. : 95132 22192

ಅನ್ನವೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಇಂದಿನ ಅನ್ನದಾಸೋಹ ದಾಸೋಹಿಗಳು
ಪ್ರಕಾಶ್ ಎಂ.
ಎಂಜಿನಿಯರ್
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**Wanted Teachers**
Qualification :
1) B.A. B.Ed - English - 02
2) B.Sc., B.Ed - PCM - 02 CBZ - 03
3) B.A., B.Ed - Hindi - 02
4) B.A. B.Ed - Social - 02
SJM English Medium Public School
80734 81049, 90197 38735

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸಿನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವುಳ್ಳ ಯುವತಿಯರು ಬೇಕಾಗಿದ್ದಾರೆ. ಕೆಲಸದ ವೇಳೆ ಬೆಳಗ್ಗೆ 8 ರಿಂದ ಸಂಜೆ 5ರವರೆಗೆ. ಕೂಡಲೇ ಸಂಪರ್ಕಿಸಿ
94807 95548
ವಾಟ್ಸ್ ಆ್ಯಪ್ : 70199 83025
(No Calling Whatsapp No)

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಕೊಟ್ಟೂರೇಶ್ವರ ಬಡಾವಣೆ ನಿಟ್ಟುವಳ್ಳಿಯಲ್ಲಿ ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ, ಕಮೋಡ್ ಸಿಸ್ಟಂ, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ /ಲೀಸ್‌ಗೆ ಇದೆ.
96634 65543

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಪಾಸೆಟ್, ಡ್ಯುರೋಫ್ಲೆಕ್ಸ್ ಬೆಡ್, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
SWAPNA CUSHION WORK
Behind Vittal Temple,
Maharaj Pet, Davanagere.
98445 81966

**ಭವಿಷ್ಯ Astrologer**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ,ಮಾಟ-ಮಂತ್ರ, ಆರೋಗ್ಯ , ಲೈಂಗಿಕ. ಸಮಸ್ಯೆ, ಸಾಲಬಾಧೆ, ಮನಃಪ್ರೇತಬಾಧೆ,ವಶೀಕರಣ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಇಂದೇ ಕರೆ ಮಾಡಿ
99807 70791

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


# ಸೋಂಕಿತರನ್ನು ಸಿಸಿ ಸೆಂಟರ್‌ಗೆ ಶಿಫ್ಟ್ ಮಾಡಲು ಸೂಚನೆ



**ಮಲೇಬೆನ್ನೂರು**

ಮಲೇಬೆನ್ನೂರು, ಜೂ.1- ಪಟ್ಟಣದಲ್ಲಿ ಹೋಂ ಐಸೋಲೇಷನ್‌ನಲ್ಲಿರುವ ಕೊರೊನಾ ಸೋಂಕಿತರನ್ನು ಕೋವಿಡ್ ಕೇರ್ ಸೆಂಟರ್‌ಗಳಿಗೆ ಶಿಫ್ಟ್ ಮಾಡಲಾಗುವುದೆಂದು ಉಪ ತಹಶೀಲ್ದಾರ್ ಆರ್. ರವಿ ತಿಳಿಸಿದರು.

ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು ನಡೆದ ಆಶಾ ಕಾರ್ಯಕರ್ತೆಯರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸೋಂಕಿತರು ಹೋಂ ಐಸೋಲೇಷನ್ನಲ್ಲಿಡುವುದರಿಂದ ಸೋಂಕು ಹರಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಸೋಂಕಿತರನ್ನು ಕೂಡಲೇ ಕೋವಿಡ್ ಕೇರ್ ಸೆಂಟರ್‌ಗಳಿಗೆ ಕಳುಹಿಸುವಂತೆ ಜಿಲ್ಲಾಧಿಕಾರಿಗಳಿಂದ ಆದೇಶವಾಗಿದೆ ಎಂದು ರವಿ ಅವರು ಆರೋಗ್ಯ ಕೇಂದ್ರದ ಸಿಬ್ಬಂದಿಗೆ ಸೂಚಿಸಿದರು.

ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಮಾತನಾಡಿ, ಸೋಂಕಿತರು ಹೋಂ ಐಸೋಲೇಷನ್ನಲ್ಲಿರುವಾಗ ಆರೋಗ್ಯದಲ್ಲಿ ಏರುಪೇರಾಗಿ ತೊಂದರೆ ಆದರೆ ಅದಕ್ಕೆ ಜನ ನಮ್ಮನ್ನೇ ದೂಷಿಸುತ್ತಾರೆ. ಸಿಸಿ ಸೆಂಟರ್‌ನಲ್ಲಿದ್ದರೆ, ಅಲ್ಲಿ ಪ್ರತಿನಿತ್ಯ ಆರೋಗ್ಯ ತಪಾಸಣೆ ಇರುತ್ತದೆ ಎಂದು ತಿಳಿ ಹೇಳಿದರು.

ಪುರಸಭೆ ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ವೈದ್ಯ ಡಾ. ನಿಸಾರ್, ಆರೋಗ್ಯ ಕೇಂದ್ರದ ಕಿರಣ್ ಇನ್ನಿತರರು ಸಭೆಯಲ್ಲಿದ್ದರು.

**52 ಪಾಸಿಟಿವ್:** ಹರಿಹರ ತಾಲ್ಲೂಕಿನಲ್ಲಿ ಮಂಗಳವಾರದ ಬೆಳಗಿನ ವರದಿ ಪ್ರಕಾರ 52 ಜನರಿಗೆ ಪಾಸಿಟಿವ್ ಬಂದಿದೆ. ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು 18 ಜನರಿಗೆ ಕೋವಿಡ್ ಟೆಸ್ಟ್ ಮಾಡಿದ್ದು, ಇಬ್ಬರಿಗೆ ಮಾತ್ರ ಸೋಂಕು ದೃಢಪಟ್ಟಿದೆ.

# ವಾರಿಯರ್ಸ್‌ಗೆ ಕಿಟ್‌ಗಳನ್ನು ನೀಡಿ ಜನುಮ ದಿನ ಆಚರಣೆ



ಮಲೇಬೆನ್ನೂರು, ಜೂ.1- ಇಲ್ಲಿನ ನಾಡಕಚೇರಿಯ ಉಪತಹಶೀಲ್ದಾರ್ ಆರ್. ರವಿ ಅವರು ತಮ್ಮ ಹುಟ್ಟುಹಬ್ಬದ ಅಂಗವಾಗಿ ಕೊರೊನಾ ವಾರಿಯರ್‌ಗಳಿಗೆ ಮಾಸ್ಕ್, ಸ್ಯಾನಿಟೈಸರ್ ಮತ್ತು ಮಧ್ಯಾಹ್ನದ ಊಟ ನೀಡಿ ಮಾದರಿಯಾದರು.

ಪೌರ ಕಾರ್ಮಿಕರು, ಕಚೇರಿಯ ಅಧಿಕಾರಿಗಳು, ಸಿಬ್ಬಂದಿಗಳು, ಪಟ್ಟಣದ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ, ಮಲೇಬೆನ್ನೂರು ಹೋಬಳಿಯ ಗ್ರಾಮ ಲೆಕ್ಕಾಧಿಕಾರಿಗಳಿಗೆ, ಗ್ರಾಮ ಸಹಾಯಕರಿಗೆ ಹಾಗೂ ಪತ್ರಕರ್ತರಿಗೆ ಕೋವಿಡ್ ಕಿಟ್ ನೀಡಿದ ರವಿ ಅವರಿಗೆ ಶುಭ ಕೋರಿದರು.


ಪುರಸಭೆ ಮುಖ್ಯಾಧಿಕಾರಿ ದಿನಕರ್, ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ, ಪುರಸಭೆ ಮಾಜಿ ಸದಸ್ಯರಾದ ಎ. ಆರೀಫ್ ಅಲಿ, ಬಿ. ಸುರೇಶ್, ಸುಬ್ಬಿ ರಾಜಪ್ಪ, ಎಂ.ಬಿ. ಫೈಜು, ಭೋವಿ ಕುಮಾರ್, ಪಿ.ಆರ್. ರಾಜು, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಬಿ. ಮಂಜುನಾಥ್, ಕುಂಬಳೂರು ವಾಸು, ಪಿ.ಆರ್. ಕುಮಾರ್, ಯೂನೂಸ್, ಪಿ.ಹೆಚ್. ಶಿವಕುಮಾರ್, ಎಂ.ಹೆಚ್. ಅರುಣ್, ಕಂದಾಯ ನಿರೀಕ್ಷಕ ಆನಂದ್, ಪುರಸಭೆ ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ಪ್ರಭು, ಗ್ರಾಮ ಲೆಕ್ಕಾಧಿಕಾರಿಗಳಾದ ಕೊಟ್ರೇಶ್, ಸುಭಾನಿ, ಆನಂದ ತೀರ್ಥ, ಬೋರಯ್ಯ, ಶ್ರೀಧರ್ ಮೂರ್ತಿ, ಶಿವಕುಮಾರ್ ಇನ್ನಿತರರು ಹಾಜರಿದ್ದರು.

# ರೆಡ್‌ಕ್ರಾಸ್ ಸಂಸ್ಥೆಯಿಂದ ಜಿಲ್ಲಾಸ್ಪತ್ರೆಗೆ ಉಪಕರಣಗಳ ಕೊಡುಗೆ

ದಾವಣಗೆರೆ, ಜೂ. 1- ಜಿಲ್ಲಾ ರೆಡ್‌ಕ್ರಾಸ್ ಸಂಸ್ಥೆಯಿಂದ ನಗರದ ಚಿಗಟೇರಿ ಜಿಲ್ಲಾಸ್ಪತ್ರೆಗೆ ಸಂಸ್ಥೆಯ ಛೇರ್ಮನ್ ಡಾ. ಶಿವಕುಮಾರ್ ಅವರ ಮಾರ್ಗದರ್ಶನದ ಮೇರೆಗೆ 2 ಲಕ್ಷ ಮೌಲ್ಯದ ಆಕ್ಸಿಜನ್, ಮಾಸ್ಕ್‌ಗಳು, 2 ವ್ಹೀಲ್ ಚೇರ್, 10000 ಐವರ್‌ಮೆಕ್ಟಿನ್ ಮಾತ್ರೆಗಳನ್ನು ಜಿಲ್ಲಾಸ್ಪತ್ರೆಯ ಅಧೀಕ್ಷಕರಾದ, ಡಾ. ಜಯಪ್ರಕಾಶ್ ಅವರಿಗೆ ಹಸ್ತಾಂತರಿಸಲಾಯಿತು.

ರೆಡ್‌ಕ್ರಾಸ್ ವೈಸ್ ಛೇರ್ಮನ್‌ಗಳಾದ ಗೌಡ್ರು ಚನ್ನಬಸಪ್ಪ, ಡಿ.ಎಸ್. ಸಿದ್ದಣ್ಣ, ಪ್ರಧಾನ ಕಾರ್ಯದರ್ಶಿ ಉಮೇಶ್ ಶೆಟ್ಟಿ, ಖಜಾಂಚಿ ಅನಿಲ ಬಾರೆಂಗಳ್, ಕಾರ್ಯದರ್ಶಿ ಡಿ.ಎಸ್. ಸಾಗರ್, ನಿರ್ದೇಶಕರು ಗಳಾದ ಆನಂದಜ್ಯೋತಿ, ಶಿವಾನಂದ, ವಸಂತರಾಜು, ಕುಮಾರ್, ಇನಾಯತ್‌ಉಲ್ಲಾ, ರವಿಕುಮಾರ್, ಕರಿಬಸಪ್ಪ, ಶ್ರೀಕಾಂತ ಬಗರೆ ಮತ್ತಿತ್ತರರು ಉಪಸ್ಥಿತರಿದ್ದರು.

# ಹರಿಹರದಲ್ಲಿ ಅಂತರ್ ಜಿಲ್ಲಾ ಕಳ್ಳನ ಬಂಧನ



ಹರಿಹರ, ಜೂ.1- ರಾಜ್ಯದ ವಿವಿಧ ಭಾಗಗಳಲ್ಲಿ ಕಳ್ಳತನ ಮಾಡಿ ಜೈಲಿನಲ್ಲಿ ಇದ್ದು ಏಪ್ರಿಲ್ ತಿಂಗಳಲ್ಲಿ ಜೈಲಿನಿಂದ ಹೊರಗಡೆ ಬಂದು ಮತ್ತೆ ಹರಿಹರ ಹಾಗೂ ದಾವಣಗೆರೆಯ ಕೆ.ಟಿ.ಜೆ ನಗರದಲ್ಲಿ ಕಳ್ಳತನ ಮಾಡಿದ್ದಾನೆನ್ನಲ್ಲಾದ ಕೊಟ್ಟೂರು ನಿವಾಸಿ ರಾಜು (ಪೋತಲ ರಾಜು) ಬಂಧಿಸಿ, ಆತನಿಂದ ಒಟ್ಟು 17 ತೊಲ ಬಂಗಾರವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ತಿಳಿಸಿದ್ದಾರೆ.

ನಗರ ವೃತ್ತ ಕಚೇರಿಯ ಸಭಾಂಗಣದಲ್ಲಿ ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆರೋಪಿ ಪೋತಲರಾಜನ ಮೇಲೆ 30 ವರ್ಷ ವಯಸ್ಸಿನಲ್ಲಿ ಸುಮಾರು 43 ಪ್ರಕರಣಗಳಿವೆ. ಆರೋಪಿ ಆಟೋ ಚಾಲಕ ವೃತ್ತಿ ಮತ್ತು ಗುಜ್ಜರಿ ವ್ಯಾಪಾರಿಯಾಗಿದ್ದು, ಮನೆ ಕಳ್ಳತನ ಮತ್ತು ಇತರೆ ಅಕ್ರಮ ಕೃತ್ಯಗಳನ್ನು ಮಾಡಿ 7 ವರ್ಷ ಜೈಲು ವಾಸ ಅನುಭವಿಸಿದ್ದಾನೆ. ಬಂಧಿತನಿಂದ ಹರಿಹರ ಪೊಲೀಸ್ ಠಾಣೆಯ 1.59 ಲಕ್ಷ ರೂ.ಮೌಲ್ಯದ 51 ಗ್ರಾಂ ಬಂಗಾರದ ಒಡವೆಗಳು. ಮತ್ತು ದಾವಣಗೆರೆ ಕೆ.ಟಿ.ಜೆ ನಗರ ಪೊಲೀಸ್ ಠಾಣೆಯ 2.75 ಲಕ್ಷ ರೂ. ಮೌಲ್ಯದ 97 ಗ್ರಾಂ ಬಂಗಾರದ ಒಡವೆಗಳನ್ನು ಪತ್ತೆ ಮಾಡಿರುವುದಾಗಿ ತಿಳಿಸಿದರು.

ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ಅವರ ಮಾರ್ಗದರ್ಶನದಲ್ಲಿ ಸಿಪಿಐ ಯು. ಸತೀಶ್ ಕುಮಾರ್, ನೇತೃತ್ವದಲ್ಲಿ ನಗರ ಠಾಣೆಯ ಪಿಎಸ್‌ಐ ಸುನಿಲ್ ಬಸವರಾಜ್ ತೇಲಿ, ಕ್ರೈಮ್ ಪಿಎಸ್‌ಐ ಲತಾ ತಾಳೇಕರ್, ಬೆರಳು ಅಚ್ಚುಗಾರ ಪಿಎಸ್‌ಐ ಮಂಜುನಾಥ್ ಕಲ್ಲೇದೇವರು ಅವರ ಸಹಾಯದೊಂದಿಗೆ ಮತ್ತು ಸಿಬ್ಬಂದಿಗಳಾದ ಎ. ಎಸ್.ಐ. ಯಾಸಿನ್ ವುಲ್ಲಾ , ಸುಣಗಾರ್ ನಾಗರಾಜ್, ಹೆಚ್.ಸಿ. ತಿಪ್ಪೇಸ್ವಾಮಿ, ಎನ್.ಎಂ. ದ್ವಾರಕೀಶ್, ದೇವರಾಜ್, ಮಂಜುನಾಥ್, ಶಿವರಾಜ್, ಸಿದ್ದರಾಜು, ಹನುಮಂತಪ್ಪ ಗೋಪನಾಳ್, ಯು.ಎನ್. ಸತೀಶ್ ಅವರುಗಳು ಆರೋಪಿಯನ್ನು ಪತ್ತೆ ಮಾಡಿದ್ದಾರೆ.

> “ ದಾವಣಗೆರೆ ಮತ್ತು ಹರಿಹರ ನಗರಗಳಲ್ಲಿನ ಮನೆಗಳ ಕಳ್ಳತನಕ್ಕೆ ಸಂಬಂಧಿಸಿದಂತೆ 17 ತೊಲ ಬಂಗಾರದ ಆಭರಣಗಳ ವಶ.
> - ಎಸ್ಪಿ ಹನುಮಂತರಾಯ

ಕಾರ್ಯಾಚರಣೆಯಲ್ಲಿ ಶ್ರಮ ವಹಿಸಿ ಕರ್ತವ್ಯವನ್ನು ಉತ್ತಮ ರೀತಿಯಲ್ಲಿ ಮಾಡಿರುವ ಸಿಬ್ಬಂದಿಗಳಿಗೆ ಜಿಲ್ಲಾ ಪೊಲೀಸ್ ಇಲಾಖೆ ಅಭಿನಂದನೆಗಳನ್ನು ಸಲ್ಲಿಸಿ, ಇವರಿಗೆ ಪ್ರಶಂಸನಾ ಪತ್ರ ನೀಡಿ ಬಹುಮಾನ ನೀಡಲಾಗುತ್ತದೆ ಎಂದು ಎಸ್ಪಿ ವಿವರಿಸಿದರು.

ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ, ಸಿಪಿಐ ಸತೀಶ್ ಕುಮಾರ್, ಪಿಎಸ್‌ಐ ಸುನಿಲ್ ಬಸವರಾಜ್, ಕ್ರೈಮ್ ಪಿಎಸ್‌ಐ ಲತಾ ತಾಳೇಕರ್, ಎ.ಎಸ್.ಐ.ಯಾಸಿನ್ ವುಲ್ಲಾ, ನಾಗರಾಜ್ ಸುಣಗಾರ್, ದ್ವಾರಕೀಶ್, ಸತೀಶ್, ಮಂಜುನಾಥ್, ದೇವರಾಜ್, ಸಿದ್ದರಾಜ್, ಹನುಮಂತಪ್ಪ, ತಿಪ್ಪೇಸ್ವಾಮಿ, ಶಿವರಾಜ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಪೊಲೀಸ್ ಹುದ್ದೆಗೆ ಎನ್‌ಐಒಎಸ್ ಸರ್ಟಿಫಿಕೇಟ್ ಕಡ್ಡಾಯ ರದ್ದಾಗಲಿ



**ಹರಪನಹಳ್ಳಿ**

ಹರಪನಹಳ್ಳಿ, ಜೂ.1- ಕೊರೊನಾ ಸಂಕಷ್ಟದ ನಡುವೆಯೂ ರಾಜ್ಯ ಸರ್ಕಾರ ಪೊಲೀಸ್ ಹುದ್ದೆಗೆ ಅರ್ಜಿ ಆಹ್ವಾನಿಸಿರುವುದು ಅಸಂಖ್ಯಾತ ನಿರುದ್ಯೋಗಿಗಳಿಗೆ ಆಶಾಕಿರಣವಾಗಿದೆ.

ಆದರೆ ಈ ನೇಮಕಾತಿಗೆ ಪಿಯುಸಿ ವಿದ್ಯಾರ್ಹತೆ ಎಂದು ಮಾಡಿ ಅದರ ಜೊತೆಗೆ ಡಿಪ್ಲೋಮಾ, ಐ.ಟಿ.ಐ, ಜೆ.ಓ.ಡಿ.ಸಿ. ಮತ್ತಿತರರಿಗೆ ಎನ್‌ಐಒಎಸ್ ಸರ್ಟಿಫಿಕೆಟ್ ಕಡ್ಡಾಯಗೊಳಿಸಿದ ಕ್ರಮ ಸರಿಯಲ್ಲ ಎಂದು ಬಳ್ಳಾರಿ ಜಿಲ್ಲಾ ಟಾಸ್ಕ್ ಫೋರ್ಸ್ ಸದಸ್ಯ ಶಶಿಧರ ಪೂಜಾರ್ ಅಸಮಾಧಾನ ವ್ಯಕ್ತ ಪಡಿಸಿದ್ದಾರೆ.

ದೇಶದ ಬೇರೆ ಯಾವ ರಾಜ್ಯದಲ್ಲಿಯೂ ಈ ರೀತಿಯ ನೇಮಕಾತಿ ಪ್ರಕ್ರಿಯೆಗಳು ಇಲ್ಲ. ಅಲ್ಲದೇ ಈ ಪರೀಕ್ಷೆಗಳು ಹಿಂದಿ ಹಾಗೂ ಇಂಗ್ಲಿಷ್ ಭಾಷೆಯಲ್ಲಿರುವುದು ನುಂಗಲಾರದ ತುತ್ತಾಗಿದೆ. ಈ ವ್ಯವಸ್ಥೆಯಿಂದ ಅನೇಕ ಪ್ರತಿಭಾವಂತರು ಪೊಲೀಸ್ ಪರೀಕ್ಷೆಯಿಂದ ವಂಚಿತರಾಗಬೇಕಾಗುತ್ತದೆ ಎಂದಿರುವ ಅವರು, ಆನ್‌ಲೈನ್ ಪರೀಕ್ಷೆ ನಡೆಸುವುದು ಸೂಕ್ತವಾಗಿದೆ ಎಂದರು.

# ಯುವಕರಿಗೆ ಸರ್ಕಾರ ಲಸಿಕೆ ನೀಡದಿರುವುದು ದುರಂತ

**(1ನೇ ಪುಟದಿಂದ)** ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ಕೋವಿಡ್ ಲಸಿಕೆಗೆ ಶಾಸಕರ ನಿಧಿಯಿಂದ 100 ಕೋಟಿ ರೂ. ನೀಡಲು ಮುಂದಾಗಿದ್ದು, ಇದರಿಂದ ಯುವಕರಿಗೆ ಲಸಿಕೆ ಹಾಕಿಸುವ ಉದ್ದೇಶ ನಮ್ಮದಾಗಿದ್ದು ಸರ್ಕಾರ ಲಸಿಕೆ ನೀಡಲು ಅನುಮತಿ ನೀಡಬೇಕಾಗಿದೆ ಎಂದರು.

ಕೆಪಿಸಿಸಿ ವೈದ್ಯಕೀಯ ಘಟಕದ ಉಪಾಧ್ಯಕ್ಷ ಡಾ. ಮಹಂತೇಶ ಚರಂತಿಮಠ್ ಮಾತನಾಡಿ, ಕಳೆದ ಕೊರೊನಾ ಅವಧಿಯಿಂದ ಕೆಪಿಸಿಸಿ ವೈದ್ಯಕೀಯ ಘಟಕ ರಾಜ್ಯಾದ್ಯಂತ ಕೋವಿಡ್ ಸೋಂಕಿತರ ನೆರವಿಗೆ ಧಾವಿಸಿದ್ದು, ಅವರಿಗೆ ಅವಶ್ಯಕತೆ ಇರುವ ಔಷಧಿ ಕಿಟ್ ಹಾಗೂ ಆರೋಗ್ಯ ಸುಧಾರಣೆ ಬಗ್ಗೆ ಜಾಗೃತಿ ಮೂಡಿಸುತ್ತಾ, ಬಂದಿದ್ದೇವೆ. ಪ್ರಸ್ತುತ ಕೊರೊನಾ ವಾರಿಯರ್ಸ್ ಹಾಗೂ ಪಕ್ಷದ ಕಾರ್ಯಕರ್ತರಿಗೆ ಸುಮಾರು 1500 ವೈದ್ಯಕೀಯ ಕಿಟ್ಟನ್ನು ನೀಡಲು ಮುಂದಾಗಿದೆ.

ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್, ನ್ಯಾಯವಾದಿ ಸಿದ್ದಲಿಂಗನಗೌಡ, ದಾದಾಪೀರ್. ಗಾಯಿತ್ರಮ್ಮ, ತಿಮ್ಮಲಾಪುರದ ನಾಗರಾಜ, ಸಚಿನ್, ದಾದಾ ಖಲಂದರ್, ಮಂಜುನಾಥ, ಅರುಣಕುಮಾರ್, ರಮೇಶ್ ಕುಮಾರ್ ಸೇರಿದಂತೆ ಇತರರು ಇದ್ದರು.

# ಜಗಳೂರು : ಪತ್ರಕರ್ತರಿಗೆ ಸಹಾಯ ಹಸ್ತ ಚಾಚಬೇಕು



ಜಗಳೂರು, ಜೂ.1- ಕೋವಿಡ್ ಸಂದರ್ಭದಲ್ಲಿ ವೈಯಕ್ತಿಕ ಆರೋಗ್ಯ ಲೆಕ್ಕಿಸದೆ ವಾರಿಯರ್‌ಗಳಾಗಿ ಸೇವೆ ಮಾಡುತ್ತಿರುವ ಕಾರ್ಯನಿರತ ಪತ್ರಕರ್ತರ ಕಷ್ಟಗಳನ್ನು ಅರಿತು ಸಹಾಯ ಹಸ್ತ ಚಾಚಬೇಕಿದೆ ಎಂದು ಸಮಾಜ ಸೇವಕ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಪತ್ರಕರ್ತರಿಗೆ ಆಹಾರ ಕಿಟ್ ವಿತರಿಸಿ ಅವರು ಮಾತನಾಡಿದರು. ಇಂದು ತಂತ್ರಜ್ಞಾನದ ಬೆಳವಣಿಗೆಯಿಂದ ಸುದ್ದಿಗಳು ಕ್ಷಣ ಮಾತ್ರದಲ್ಲಿ ಗ್ರಾಮೀಣ ಭಾಗದ ಕಟ್ಟಕಡೆಯ ವ್ಯಕ್ತಿಗೂ ಪಸರಿಸುತ್ತವೆ. ಪತ್ರಕರ್ತರು ತಮ್ಮ ಪ್ರಾಣಗಳನ್ನು ಮುಡಿಪಾಗಿಟ್ಟು ಕಾರ್ಯ ನಿರ್ವಹಿಸುತ್ತಿರುವುದು ಪ್ರಶಂಸನೀಯ ಎಂದರು.

ಈ ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಕೊಟ್ರೇಶ್ ಅಣಬೂರು ಮಠ, ತಾಲ್ಲೂಕು ಅಧ್ಯಕ್ಷ ಚಿದಾನಂದಪ್ಪ, ಮುಖಂಡರಾದ ಓಮಣ್ಣ, ಅನುಪ್ ರೆಡ್ಡಿ, ಗುರುಸಿದ್ದನಗೌಡ, ಸರ್ಕಾರಿ ನೌಕರರ ಸಂಘದ ನಾಗೇಶ್ ಗೌಡ, ಚಂದ್ರಪ್ಪ, ಲಕ್ಷ್ಮಿಕಾಂತ್, ಪತ್ರಕರ್ತರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಸಿಎಂ ಗಾದಿಗಾಗಿ ಕಸರತ್ತು

**(1ನೇ ಪುಟದಿಂದ)** ತಮ್ಮ ತಂದೆಯ ಅಧಿಕಾರ ಉಳಿಸಿಕೊಳ್ಳಲು ವರಿಷ್ಠರ ಮನವೊಲಿಸುವ ಉದ್ದೇಶಕ್ಕೆ ದೆಹಲಿಗೆ ಪ್ರಯಾಣಿಸಿದ್ದಾರೆ.

ವಿಜಯೇಂದ್ರ ಅವರ ಮಾತಿಗೆ ವರಿಷ್ಠರು ಸೊಪ್ಪು ಹಾಕುವುದಿಲ್ಲ. ಜೂನ್ 15 ರ ನಂತರ ರಾಜ್ಯದಲ್ಲಿ ಮಹತ್ತರ ಬದಲಾವಣೆಯಾಗುತ್ತದೆ ಎಂಬ ವಿಶ್ವಾಸವನ್ನು ವಿರೋಧಿಗಳು ವ್ಯಕ್ತಪಡಿಸುತ್ತಿದ್ದಾರೆ. ಆದರೆ, ಮುಖ್ಯಮಂತ್ರಿಯವರು ಮಾತ್ರ ಈ ಬಗ್ಗೆ ಯಾವುದಕ್ಕೂ ಚಕರಾವೆತ್ತುತ್ತಿಲ್ಲ. ಆದರೆ ತಮಗೂ ಬೆಂಬಲವಿದೆ ಎಂಬುದನ್ನು ತೋರ್ಪಡಿಸಿಕೊಳ್ಳಲು ಪರೋಕ್ಷವಾಗಿ ಶಾಸಕರು ಗುಂಪು ಗುಂಪಾಗಿ ತಮ್ಮನ್ನು ಭೇಟಿ ಮಾಡಿರುವ ಕೆಲಸ ಮಾಡುತ್ತಿದ್ದಾರೆ.

ಇದರ ನಡುವೆ ಪಕ್ಷದ ಹಿರಿಯ ಶಾಸಕ ಬಸವರಾಜ್ ಪಾಟೀಲ್ ಯತ್ನಾಳ್, ಮುಖ್ಯಮಂತ್ರಿಯವರು ತಮ್ಮ ಅಧಿಕಾರ ಉಳಿಸಿಕೊಳ್ಳಲು ಸಮಾಜದ ಮಠಾಧೀಶರ ಮೊರೆ ಹೋಗಿದ್ದಾರೆ. ಅವರ ಪುತ್ರ ಎಲ್ಲಾ ಮಠಾಧೀಶರನ್ನು ಸಂಪರ್ಕಿಸಿ, ಇಲ್ಲವೇ ಭೇಟಿ ಮಾಡಿ ತಂದೆಯ ಉಳಿವಿಗಾಗಿ ಮನವಿ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ. ಇದರ ಬೆನ್ನಲ್ಲೇ ವಿಜಯೇಂದ್ರ ದೆಹಲಿ ಪ್ರವಾಸ ಕೈಗೊಂಡಿದ್ದಾರೆ. ಇನ್ನು ಸಚಿವ ಯೋಗೇಶ್ವರ್‌ಗೆ ನಾಯಕತ್ವದ ವಿರುದ್ಧ ಯಾವುದೇ ಹೇಳಿಕೆಗಳನ್ನು ಸಾರ್ವಜನಿಕವಾಗಿ ನೀಡ ಬಾರದೆಂದು ಪಕ್ಷದ ವರಿಷ್ಠರು ಆದೇಶ ಮಾಡಿರುವುದಲ್ಲದೆ, ನಾವೇ ಮುಂದೆ ಇದೆಲ್ಲವನ್ನೂ ನೋಡಿಕೊಳ್ಳುತ್ತೇವೆ ಎಂದು ಮುಗುಮ್ಮಾಗಿ ಹೇಳಿದ್ದಾರೆ.

## ಸಿದ್ದರಾಮಯ್ಯ ಆಸ್ಪತ್ರೆಗೆ

**(1ನೇ ಪುಟದಿಂದ)** ಅವರ ವೈದ್ಯರು ತಪಾಸಣೆ ಮಾಡಿದರು.

ಕಚೇರಿ ಮೂಲಗಳ ಪ್ರಕಾರ ಕೋವಿಡ್ ನೆಗೆಟಿವ್ ಬಂದಿದೆ ಎಂದು ಮಾಹಿತಿ ನೀಡಿದ್ದಾರೆ. ಮಧ್ಯಾಹ್ನದ ವೇಳೆಗೆ ಅವರ ಆರೋಗ್ಯದಲ್ಲಿ ಭಾರೀ ವ್ಯತ್ಯಾಸ ಕಂಡಿದ್ದರಿಂದ ಅಸವರನ್ನು ಆಸ್ಪತ್ರೆಗೆ ದಾಖಲು ಮಾಡಲಾಯಿತು. ಕೊರೊನಾ ಮೊದಲನೇ ಅಲೆಯ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಸೋಂಕಿಗೆ ಸಿಲುಕಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಗುಣಮುಖರಾಗಿದ್ದರು.

ಸಿದ್ದರಾಮಯ್ಯನವರು ಕೊರೊನಾದ ಎರಡು ಹಂತದ ಲಸಿಕೆ ಪಡೆದುಕೊಂಡಿದ್ದಾರೆ.


## ಕೈಲಾಸ ಸಮಾರಾಧನೆ ಆಹ್ವಾನ




ದಾವಣಗೆರೆ ಸಿಟಿ ಚೌಕಿಪೇಟೆ ವಾಸಿ ಲಿಂ|| ಶ್ರೀ ಜಿ.ಎಂ. ಬಸಯ್ಯನವರ ಮಗ ಶ್ರೀ ಜಿ.ಎಂ. ಬಸವರಾಜಯ್ಯ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.
ದಿನಾಂಕ : 30.05.2021ನೇ ಭಾನುವಾರ ಬೆಳಿಗ್ಗೆ 11.40ಕ್ಕೆ ನಮ್ಮ ಪೂಜ್ಯ ತಾಯಿಯವರಾದ **ಶ್ರೀಮತಿ ಬೀಜಾಕ್ಷಮ್ಮ**
(ಲಿಂ|| ಶ್ರೀ ಜಿ.ಎಂ. ಬಸಯ್ಯನವರ ಧರ್ಮಪತ್ನಿ)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **‘ಕೈಲಾಸ ಸಮಾರಾಧನೆ’ಯನ್ನು** ದಿನಾಂಕ : 03.06.2021ನೇ ಗುರುವಾರ ಬೆಳಿಗ್ಗೆ 12.00 ಗಂಟೆಗೆ ಮೃತರ ಸ್ವಗೃಹ ಚೌಕಿಪೇಟೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು - ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖಿತಪ್ತರು : ಜಿ.ಎಂ. ಬಸಯ್ಯನವರ ಮಕ್ಕಳು ಮತ್ತು ಗುಡ್ಡದ ರಂಗವ್ವನಹಳ್ಳಿ ಕುಟುಂಬದವರು ಹಾಗೂ ಬಂಧುಗಳು-ಮಿತ್ರರು.


## ಹೊಳೆಸಿರಿಗೆರೆ ಗ್ರಾಮದ ಶೇಖಮ್ಮ ನಿಧನ




ಹರಿಹರ ತಾ. ಹೊಳೆಸಿರಿಗೆರೆ ಗ್ರಾಮದ ವಾಸಿ, ಇಂಗಳಗೊಂದಿ ತಿಪ್ಪಣ್ಣನವರ ಧರ್ಮಪತ್ನಿ ಹಾಗೂ ನಿವೃತ್ತ ಸೈನಿಕ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪಾಧ್ಯಕ್ಷರೂ ಆದ ಪರಶುರಾಮ್ ಅವರ ತಾಯಿಯವರಾದ **ಶ್ರೀಮತಿ ಶೇಖಮ್ಮ** (68 ವರ್ಷ) ಅವರು ದಿನಾಂಕ 01.06.2021ರ ಮಂಗಳವಾರ ಸಾಯಂಕಾಲ 5.30ಕ್ಕೆ ನಿಧನರಾದರು.
ಪತಿ, ಐವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 02.06.2021ರ ಬುಧವಾರ ಬೆಳಗ್ಗೆ 11 ಗಂಟೆಗೆ ಹೊಳೆಸಿರಿಗೆರೆಯಲ್ಲಿ ನೆರವೇರಲಿದೆ.

## ನಂದಿಹಳ್ಳಿ ಮುರುಗೇಶಪ್ಪ ನಿಧನ



ದಾವಣಗೆರೆ ವಿನೋಬನಗರ ಒಂದನೇ ಮುಖ್ಯ ರಸ್ತೆಯ ನಿವಾಸಿ ನಂದಿಹಳ್ಳಿ ಮುರುಗೇಶಪ್ಪ (BSNL ದುರಸ್ತಿ ಸಹಾಯಕ) ಅವರು, ದಿನಾಂಕ 1.06.2021 ರ ಮಂಗಳವಾರ ರಾತ್ರಿ 9.15 ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.06.2021 ರ ಬುಧವಾರ ಬೆಳಿಗ್ಗೆ 11 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಿದೆ.

## ಬಿ.ದುರ್ಗದ ಸಾಂತಪ್ಪರ ತಿಪ್ಪಣ್ಣ ನಿಧನ



ದಾವಣಗೆರೆ ಸಿಟಿ ಸರಸ್ವತಿ ನಗರ ವಾಸಿಯಾದ ಬಿ. ದುರ್ಗದ ಸಾಂತಪ್ಪರ ತಿಪ್ಪಣ್ಣ (ತಿಪ್ಪೇರುದ್ರಪ್ಪ) (92) ಅವರು ದಿನಾಂಕ 1.06.2021ರಂದು ಮಂಗಳವಾರ ಸಂಜೆ 4.30ಕ್ಕೆ ದೈವಾಧೀನರಾಗಿದ್ದಾರೆ. ಪತ್ನಿ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 02.06.2021ರ ಬುಧವಾರ ಬೆಳಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕು ತರಳಬಾಳು ನಗರದ (6ನೇ ಕಲ್ಲು) ಸಮೀಪದ ಬಿಸಲೇರಿ ತೋಟದಲ್ಲಿ ನೆರವೇರಿಸಲಾಗುವುದು

## ಹೆಚ್.ಎಸ್. ಪರಶುರಾಮ್ ರಾವ್ ಸಾವಂತ್ ನಿಧನ




ದಾವಣಗೆರೆ ಯಲ್ಲಮ್ಮನಗರ ಮೂರನೇ ಮೇನ್, 9ನೇ ಕ್ರಾಸ್ ವಾಸಿ, ಅಂಚೆ ಕಛೇರಿ ನಿವೃತ್ತ ನೌಕರರಾದ ಹೆಚ್.ಎಸ್. ಪರಶುರಾಮ್ ರಾವ್ ಸಾವಂತ್ (67) ಅವರು, ದಿನಾಂಕ 1.06.2021 ರ ಮಂಗಳವಾರ ರಾತ್ರಿ 9.40 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.06.2021 ರ ಬುಧವಾರ ಬೆಳಿಗ್ಗೆ 10.00 ಗಂಟೆಗೆ ನಗರದ ಪಿ.ಬಿ. ರೋಡ್‌ನಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

## ಕೆ.ಟಿ. ರುದ್ರೇಶ್ ನಿಧನ



ದಾವಣಗೆರೆ ಕೆ.ಟಿ.ಜೆ ನಗರ 1ನೇ ಮೇನ್, 11ನೇ ಕ್ರಾಸ್ ನಿಟುವಳ್ಳಿ ಮೇನ್ ರೋಡ್ ವಾಸಿ ಕೆ.ಟಿ. ರುದ್ರೇಶ್ (52) ಅವರು, ದಿನಾಂಕ 1.06.2021 ರ ಮಂಗಳವಾರ ರಾತ್ರಿ 10 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.06.2021 ರ ಬುಧವಾರ ಬೆಳಿಗ್ಗೆ 10.30 ಗಂಟೆಗೆ ನಗರದ ಲೇಬರ್ ಕಾಲೋನಿಯಲ್ಲಿರುವ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.


## ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ : 19.05.2021ನೇ ಬುಧವಾರ ಮಧ್ಯಾಹ್ನ 1.58ಕ್ಕೆ ನಿಧನರಾದ
**ಶ್ರೀ ಎ.ಪಿ.ಸಿ. ಶರಣಪ್ಪ**
ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಪ್ರಾರ್ಥಿಸುವ...
ಡಿ.ಆರ್. ಗಿರಿರಾಜು, ಪತ್ರ ಬರಹಗಾರರು
ಮತ್ತು ಡಿ.ಆರ್. ಫ್ಯಾಮಿಲಿ, ದಾವಣಗೆರೆ.

## ಕೈಲಾಸ ಸಮಾರಾಧನೆ ಆಹ್ವಾನ



ದಾವಣಗೆರೆ ಸಿಟಿ, # 3128/1, 9ನೇ ಮೇನ್, ಎಂಸಿಸಿ ಬಿ ಬ್ಲಾಕ್, ವಾಸಿ,
ಶ್ರೀ ವೀರೇಂದ್ರ ಕೆ.ಹೆಚ್.,
ಡಾ|| ರಾಜೀವ್ ಕೆ.ಹೆಚ್.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 21.05.2021ನೇ ಶುಕ್ರವಾರ ರಾತ್ರಿ 8.35ಕ್ಕೆ ನನ್ನ ಪೂಜ್ಯ ತಾಯಿಯಾದ
**ಶ್ರೀಮತಿ ಕೆ.ವಿ. ದುಗ್ಗಮ್ಮ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**‘ಕೈಲಾಸ ಸಮಾರಾಧನೆ’ಯನ್ನು**
ದಿನಾಂಕ : 02.06.2021ನೇ ಬುಧವಾರ ಬೆಳಿಗ್ಗೆ 11.30ಕ್ಕೆ ದಾವಣಗೆರೆ ಸಿಟಿ # 3128/1, 9ನೇ ಮೇನ್, ಎಂ.ಸಿ.ಸಿ. "ಬಿ" ಬ್ಲಾಕ್‌ನ, ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು :
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಲ್ಲೂರು ವಂಶಸ್ಥರು

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 30.05.2021ರಂದು ನಿಧನರಾದ ನಮ್ಮ ಆತ್ಮೀಯ ಹಿರಿಯ ಚೇತನ
**ಶ್ರೀ ಜಿ. ಹನುಮಂತಪ್ಪ ಕುಂದೂರು**
ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಪ್ರಾರ್ಥಿಸುವ
ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಹಾಗೂ
ಶ್ರೀ ಸಿ.ಟಿ. ಚಂದ್ರಪ್ಪ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು, ದಾವಣಗೆರೆ


## ಐಗೂರು ಕೆ.ಎಂ. ಪಾಲಾಕ್ಷಪ್ಪ ನಿಧನ



ದಾವಣಗೆರೆ ತಾ. ಐಗೂರು ಗ್ರಾಮದ ವಾಸಿ ನಿವೃತ್ತ ಮುಖೋಪಾಧ್ಯಾಯರಾದ ಐಗೂರು ಪಾಲಾಕ್ಷಪ್ಪ (64) ಇವರು ದಿನಾಂಕ 1.06.2021ರ ಸೋಮವಾರ ರಾತ್ರಿ 7 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸೊಸೆ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.06.2021 ರ ಸೋಮವಾರ ರಾತ್ರಿ ನೆರವೇರಿತು.

## ರಜಿಯಾ ಖಾನಂ ನಿಧನ



ದಾವಣಗೆರೆ ಕೆ.ಟಿ.ಜೆ ನಗರ 2ನೇ ಮೇನ್, 8ನೇ ಕ್ರಾಸ್ ವಾಸಿ ತಂಜೀಮುಲ್ ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ದಿ. ಹಮೀದ್‌ಖಾನ್ ಸಾಬ್ ಇವರ ಪತ್ನಿ ಶ್ರೀಮತಿ ರಜಿಯಾ ಖಾನಂ (65) ಅವರು, ದಿನಾಂಕ 1.06.2021 ರ ಮಂಗಳವಾರ ರಾತ್ರಿ 10 ಗಂಟೆಗೆ ನಿಧನರಾದರು. ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.06.2021 ರ ಬುಧವಾರ ಮಧ್ಯಾಹ್ನ 12 ಗಂಟೆಗೆ ನಗರದ ಪಿ.ಬಿ. ರಸ್ತೆಯ ಹಳೆ ಖಬರಸ್ಥಾನದಲ್ಲಿ ನೆರವೇರಲಿದೆ.

# ಗಂಗಾ ಸೊಸೈಟಿಯಿಂದ ಸಾರ್ವಜನಿಕ ಆಸ್ಪತ್ರೆಗೆ 3 ಕಾನ್ಸಂಟ್ರೇಟರ್ ಕೊಡುಗೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಜೂ. 1 - ಕೋವಿಡ್ ಸೋಂಕಿತರಿಗೆ ಆಕ್ಸಿಜನ್ ಕೊರತೆಯಾಗಬಾರದೆಂಬ ಉದ್ದೇಶದಿಂದ ಆಕ್ಸಿಜನ್ ಕಾನ್ಸಂ ಟ್ರೇಟರ್ ಅನ್ನು ನೀಡಲಾಗುವುದು ಎಂದು ಸ್ಥಳೀಯ ಗಂಗಾ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ರತ್ನಾಕರ ಕುಂದಾಪುರ ತಿಳಿಸಿದ್ದಾರೆ.

ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಗಂಗಾ ಕೋ- ಆಪರೇಟಿವ್ ಸೊಸೈಟಿ ವತಿಯಿಂದ 2.50 ಲಕ್ಷ ರೂ. ಮೌಲ್ಯದ 3 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ತಹಶೀಲ್ದಾರ್ ಅವರ ಮೂಲಕ ಆಸ್ಪತ್ರೆಗೆ ಹಸ್ತಾಂತರಿಸಿದ ಸಂದರ್ಭದಲ್ಲಿ ಅವರು ಈ ವಿಷಯ ತಿಳಿಸಿದರು. ಸ್ಥಳೀಯ ಹರ್ಷ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ತಜ್ಞ ಡಾ. ನಾಗರಾಜ ದೊಡ್ಮನಿ ಮಾತನಾಡಿ, ರೋಗಿಗಳ ಆರೋಗ್ಯ ರಕ್ಷಣೆ ಮಾಡಲು ಸರ್ಕಾರದ ಜೊತೆ ಕೈಜೋಡಿಸಲು ಗಂಗಾ ಸೊಸೈಟಿ ಮುಂದಾಗಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಹಶೀಲ್ದಾರ್ ಜಿ.ಎಸ್. ಶಂಕರ್, ಡಿಎಚ್‌ಓ ರಾಘವೇಂದ್ರ ಸ್ವಾಮಿ, ಕೃಷ್ಣಮೂರ್ತಿ ಸುಣಗಾರ, ಡಾ. ಬಸವರಾಜ ಕೇಲಗಾರ, ಹನುಮಂತಪ್ಪ ಕುರು ವತ್ತಿ, ಬಗಾಡೆ, ಮಂಜುನಾಥ ಬಾರ್ಕಿ, ತಾಲ್ಲೂಕು ವೈದ್ಯಾಧಿಕಾರಿ ಸಂತೋಷ್ ಕುಮಾರ್, ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಪರಮೇ ಶಪ್ಪ, ಹನುಮಂತಪ್ಪ ಕಬ್ಬಾರ, ಲಕ್ಷ್ಮಣ ದಾಸರ, ಲಕ್ಷ್ಮಣ ಸುಣಗಾರ, ಆನಂದ ಸುಣಗಾರ, ಆಂಜನೇಯ ಬಾಳಿಕಾಯಿ, ಸಂಸ್ಥೆಯ ವ್ಯವಸ್ಥಾಪಕರಾದ ಅನ್ನ ಪೂರ್ಣ ಬಾರ್ಕಿ ಹಾಗೂ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿಕಲಚೇತನರಿಗೆ ಇಂದು ಲಸಿಕೆ ಆಂದೋಲನ

ಜಿಲ್ಲೆಯ ಎಲ್ಲಾ ವಿಧದ ವಿಕಲಚೇತನರಿಗೆ ಇಂದು ಮತ್ತು ನಾಳೆ ಜಿಲ್ಲೆಯಲ್ಲಿನ ಎಲ್ಲಾ ನಗರ ಮತ್ತು ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ನಿರೋಧಕ ಲಸಿಕೆಯನ್ನು ವಿಕಲಚೇತನರಿಗೋಸ್ಕರ ಮೀಸಲಿಟ್ಟು ಹಾಕಲಾಗುವುದು.

ಎಲ್ಲಾ ವಿಕಲಚೇತನರು ಎಂ.ಆರ್.ಡಬ್ಲ್ಯೂ, ವಿ. ಆರ್.ಡಬ್ಲ್ಯೂ ಮತ್ತು ಯು.ಆರ್.ಡಬ್ಲ್ಯೂಗಳ ಸಹಕಾರದೊಂದಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿ ತಪ್ಪದೇ ಲಸಿಕೆ ಹಾಕಿಸಿಕೊಳ್ಳಬೇಕು. ಜಿಲ್ಲೆಯ ವಿಕಲಚೇತನರಿಗಾಗಿಯೇ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್‌ನಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಗ್ರಾ.ಪಂ. ವ್ಯಾಪ್ತಿಯ ವಿ. ಆರ್.ಡಬ್ಲ್ಯೂ ಮತ್ತು ಎಂ.ಆರ್.ಡಬ್ಲ್ಯೂಗಳನ್ನು ಸಂಪರ್ಕಿಸಬಹುದು. ತಾಲ್ಲೂಕು ಎಂ.ಆರ್. ಡಬ್ಲ್ಯೂಗಳ ದೂರವಾಣಿ ಸಂಖ್ಯೆ ಬಿ.ಚನ್ನಪ್ಪ (95908 29024), ಕೆ.ಸುಬ್ರಮಣ್ಯಂ (9945738141), ಕೆ. ಎಂ. ಶೈಲಜಾ (9886366809), ಎಂ.ಕೆ ಶಿವನಗೌಡ (9902105734), ಕೆ.ಹೆಚ್.ಗಂಗಾಧರ (98449 55315) ಹಾಗೂ ವಿಕಲಚೇತನರ ಸಹಾಯವಾಣಿ ಮತ್ತು ಮಾಹಿತಿ ಸಲಹಾ ಕೇಂದ್ರದ ದೂರವಾಣಿ ಸಂಖ್ಯೆ 08192-263939 ಸಂಪರ್ಕಿಸಬಹುದು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣಧಿಕಾರಿ ಜಿ.ಎಸ್. ಶಶಿಧರ್ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಮುಂಗಾರು ಕೃಷಿ ಚಟುವಟಿಕೆಗಳ ಪೂರ್ವ ಸಿದ್ಧತೆ

**ಮುಖ್ಯಮಂತ್ರಿ ಸಭೆ**

ಬೆಂಗಳೂರು, ಜೂ. 1- ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇಂದು ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳಿಗೆ ಪೂರ್ವ ಸಿದ್ಧತೆ ಕುರಿತಂತೆ ಸಭೆ ನಡೆಸಿದರು.

ರಾಜ್ಯದಲ್ಲಿ ಈವರೆಗೆ ಚೆನ್ನಾಗಿ ಮಳೆಯಾಗಿದೆ. ಕರ್ನಾಟಕದ 20 ಜಿಲ್ಲೆಗಳಲ್ಲಿ ವಾಡಿಕೆಯಷ್ಟು ಹಾಗೂ 10 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಜೂನ್ 6-7ರ ವೇಳೆಗೆ ಮುಂಗಾರು ಪ್ರಾರಂಭವಾಗಲಿದೆ ಎಂದು ಸಭೆಗೆ ತಿಳಿಸಲಾಗಿದೆ.

2020-21ರಲ್ಲಿ ದಾಖಲೆ ಪ್ರಮಾಣದ 153.08 ಲಕ್ಷ ಟನ್ ಗಳಷ್ಟು ಆಹಾರ ಧಾನ್ಯ ಉತ್ಪಾದನೆ ಆಗಿದೆ. ಕಳೆದ ವರ್ಷಕ್ಕಿಂತ ಶೇ. 10 ರಷ್ಟು ಹೆಚ್ಚಳವಾಗಿದೆ. ಈ ವರ್ಷ 135.48 ಲಕ್ಷ ಟನ್ ಆಹಾರ ಉತ್ಪಾದನೆಯ ಗುರಿ ಹೊಂದಲಾಗಿದೆ.

ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಸಾಕಷ್ಟು ಸಂಖ್ಯೆಯಲ್ಲಿದೆ. ಡಿಎಪಿ ಪೂರೈಕೆಯಲ್ಲಿ ಇದ್ದ ಸಮಸ್ಯೆ ಬಗೆಹರಿಸಲಾಗಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದರು.

ಡಿಎಪಿ ಗೊಬ್ಬರ ಮತ್ತು ಯೂರಿಯಾ ಗೊಬ್ಬರ ಸಕಾಲದಲ್ಲಿ ಪೂರೈಸುವ ಬಗ್ಗೆ ಕೇಂದ್ರ ಸಚಿವರೊಂದಿಗೆ ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ರಾಜ್ಯದಲ್ಲಿ 690 ಕೃಷಿ ಯಂತ್ರ ಧಾರೆ ಕೇಂದ್ರಗಳು ಹಾಗೂ 210 ಗ್ರಾಮ ಮಟ್ಟದ ಕೃಷಿ ಯಂತ್ರೋಪಕರಣಗಳ ಬ್ಯಾಂಕ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಬಾಡಿಗೆ ಆಧಾರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸಲಾಗುತ್ತಿದೆ ಎಂದು ಸಚಿವ ಪಾಟೀಲ್ ಹೇಳಿದರು.

ಕೋವಿಡ್ 2ನೇ ಅಲೆಯ ಹಿನ್ನೆಲೆಯಲ್ಲಿ ಹೂವು, ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಘೋಷಿಸಲಾದ ಪರಿಹಾರ ವಿತರಣೆ ಈಗಾಗಲೇ ಪ್ರಾರಂಭವಾಗಿದ್ದು, ಇದಕ್ಕಾಗಿ ಬಿಡುಗಡೆಯಾಗಿರುವ 19 ಕೋಟಿ ರೂ. ಗಳಲ್ಲಿ 15.23 ಕೋಟಿ ರೂ. ಗಳನ್ನು 36,327 ಫಲಾನುಭವಿಗಳ ಖಾತೆಗೆ ಡಿಬಿಟಿ ಮೂಲಕ ವರ್ಗಾಯಿಸಲಾಗಿದೆ ಎಂದು ಸಭೆಗೆ ತಿಳಿಸಲಾಗಿದೆ.

2020-21ರಲ್ಲಿ ಕೃಷಿ ಸಾಲ ಗುರಿಗಿಂತ ಶೇ. 16 ಹೆಚ್ಚು ವಿತರಣೆ ಮಾಡಲಾಗಿದೆ. ಕಳೆದ ವರ್ಷಕ್ಕಿಂತ 3 ಸಾವಿರ ಕೋಟಿ ರೂ. ಹೆಚ್ಚುವರಿ ಗುರಿ ನಿಗದಿ ಪಡಿಸಿದ್ದು, ಪ್ರಸಕ್ತ ಸಾಲಿನಲ್ಲಿ 21 ಸಾವಿರ ಕೋಟಿ ರೂ. ಸಾಲ ವಿತರಣೆಯ ಗುರಿ ನಿಗದಿ ಪಡಿಸಲಾಗಿದೆ.

ಬೆಂಬಲ ಬೆಲೆಯಲ್ಲಿ ಬೆಳೆ ಖರೀದಿ ಕಳೆದ ವರ್ಷ ದಾಖಲೆ ಪ್ರಮಾಣದಲ್ಲಿ ನಡೆದಿದೆ. ಇದಕ್ಕೆ ಸಂಬಂಧಿಸಿದಂತೆ 1067 ಕೋಟಿ ರೂ. ಪಾವತಿಗೆ ಬಾಕಿ ಇದ್ದು, ಕೂಡಲೇ 250 ಕೋಟಿ ರೂ. ಬಿಡುಗಡೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಸಭೆಯಲ್ಲಿ ಉಪಮುಖ್ಯಮಂತ್ರಿ ಗೋವಿಂದ ಎಂ. ಕಾರಜೋಳ, ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ತೋಟಗಾರಿಕಾ ಸಚಿವ ಶಂಕರ್, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣರೆಡ್ಡಿ, ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮ ಮತ್ತಿತರರು ಭಾಗವಹಿಸಿದ್ದರು.

# ಕೇಂದ್ರಗಳಲ್ಲಿ ಮನೆಯಂತಹ ಸೌಲಭ್ಯ

**(1ನೇ ಪುಟದಿಂದ)** ಎಂದರು.


**ವೈದ್ಯರು, ಸಿಬ್ಬಂದಿಗಳ ನೇಮಕ :** ರಾಜ್ಯ ಮಟ್ಟದಲ್ಲಿ ವೈದ್ಯರು ಹಾಗೂ ತಜ್ಞ ವೈದ್ಯರ ನೇಮಕಾತಿ ಪ್ರಕ್ರಿಯೆ ನಡೆದಿದ್ದು, ದಾವಣಗೆರೆ ಜಿಲ್ಲೆಗೆ ರಾಜ್ಯ ಮಟ್ಟದಿಂದ 23 ಎಂಬಿಬಿಎಸ್ ವೈದ್ಯರು ಹಾಗೂ 19 ತಜ್ಞ ವೈದ್ಯರನ್ನು ನಿಯುಕ್ತಿ ಮಾಡಲಾಗಿದ್ದು, ಜಿಲ್ಲಾ ಮಟ್ಟದಲ್ಲಿಯೂ 24 ವೈದ್ಯರು ಹಾಗೂ 34 ಶುಶ್ರೂಷಕರ ನೇಮಕ ಮಾಡಿಕೊಳ್ಳಲು ಕ್ರಮ ವಹಿಸಲಾಗಿದೆ. ಶೀಘ್ರದಲ್ಲಿಯೇ ಜಿಲ್ಲೆಯಲ್ಲಿ ವೈದ್ಯರು ಹಾಗೂ ತಜ್ಞ ವೈದ್ಯರು, ಶುಶ್ರೂಷಕರ ಕೊರತೆ ನೀಗುವ ಮೂಲಕ ಸಮರ್ಪಕ ವೈದ್ಯಕೀಯ ಸೌಲಭ್ಯ ಜಿಲ್ಲೆಗೆ ದೊರೆಯಲಿದೆ ಎಂದು ಸಚಿವ ಬಸವರಾಜ ಹೇಳಿದರು.

ಸಭೆಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಚನ್ನಗಿರಿ ಶಾಸಕ ಹಾಗೂ ಕೆಎಸ್‌ಎಸ್‌ಡಿಎಲ್ ಅಧ್ಯಕ್ಷರೂ ಆಗಿರುವ ಶಾಸಕ ಮಾಡಾಳ್ ವಿರುಪಾಕ್ಷಪ್ಪ, ಹೊನ್ನಾಳಿ ಶಾಸಕ ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಲಿಡ್ಕರ್ ಅಧ್ಯಕ್ಷರೂ ಆಗಿರುವ ಶಾಸಕ ಪ್ರೊ. ಲಿಂಗಣ್ಣ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಮತ್ತಿತರರು ಉಪಸ್ಥಿತರಿದ್ದರು.

**ಮಳೆಗಾಲ ತೊಂದರೆಯಾಗದಿರಲಿ**

ಮಳೆಗಾಲ ಪ್ರಾರಂಭವಾಗುತ್ತಿದ್ದು, ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ಮಾರ್ಟ್ ಸಿಟಿ ಅಧಿಕಾರಿಗಳು ಹಾಗೂ ಮಹಾನಗರ ಪಾಲಿಕೆ ಆಯುಕ್ತರು ಜಂಟಿಯಾಗಿ ಸಮನ್ವಯತೆಯಿಂದ ಕಾರ್ಯನಿರ್ವಹಿಸಿ, ಹೆಚ್ಚಿನ ಮಳೆಯಾದಲ್ಲಿ ತೊಂದರೆ ಎದುರಾಗಬಹುದಾದ ಸ್ಥಳಗಳನ್ನು ಗುರುತಿಸಿ, ಪರಿಹಾರಕ್ಕಾಗಿ ಕೈಗೊಳ್ಳಬಹುದಾದ ಪರಿಹಾರ ಕ್ರಮಗಳನ್ನು ಈಗಲೇ ಮಾಡಿಕೊಳ್ಳಬೇಕು. ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾರ್ಡ್‌ವಾರು ಪರಿಶೀಲನೆ ನಡೆಸಿ, ನ್ಯೂನತೆಗಳನ್ನು ಸರಿಪಡಿಸುವ ಕಾರ್ಯ ಪ್ರಾರಂಭಿಸಬೇಕು ಎಂದು ಸಚಿವ ಭೈರತಿ ಬಸವರಾಜ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

# ಭಾರತದಲ್ಲಿ ಕಂಡು ಬಂದ ಕೊರೊನಾ ರೂಪಾಂತರಿಗಳಿಗೆ 'ಕಪ್ಪ', 'ಡೆಲ್ಟ' ಹೆಸರು



ವಿಶ್ವಸಂಸ್ಥೆ, ಜೂ. 1 – ಭಾರತದಲ್ಲಿ ಮೊದಲು ಗುರುತಿಸಲಾದ ಬಿ.1.617.1 ಹಾಗೂ ಬಿ.1.617.2 ಕೊರೊನಾ ರೂಪಾಂತರಿಗಳನ್ನು ವಿಶ್ವ ಆರೋಗ್ಯ ಸಂಘಟನೆ ಕ್ರಮವಾಗಿ 'ಕಪ್ಪ' ಮತ್ತು 'ಡೆಲ್ಟಾ' ಎಂಬ ಹೆಸರಿಟ್ಟಿದೆ. ಕೊರೊನಾ ರೂಪಾಂತರಿಗಳ ಹೆಸರುಗಳ ಕುರಿತು ಕಳಂಕ ಹಚ್ಚುವುದನ್ನು ತಡೆಯಲು ಆರೋಗ್ಯ ಸಂಘಟನೆ ಈ ಕ್ರಮ ತೆಗೆದುಕೊಂಡಿದೆ.


ಕೊರೊನಾ ರೂಪಾಂತರಿಯನ್ನು ಭಾರತೀಯ ರೂಪಾಂತರಿ ಎಂದು ಗುರುತಿಸುವುದಕ್ಕೆ ಭಾರತ ಮೂರು ವಾರಗಳ ಹಿಂದೆ ಆಕ್ಷೇಪ ವ್ಯಕ್ತಪಡಿಸಿತ್ತು.

ಟ್ವೀಟ್ ಮೂಲಕ ಹೇಳಿಕೆ ನೀಡಿರುವ ಆರೋಗ್ಯ ಸಂಘಟನೆಯ ತಾಂತ್ರಿಕ ಪರಿಣಿತರಾದ ಡಾ. ಮಾರಿಯಾ ವ್ಯಾನ್ ಕೆರ್ಖೋವೆ, ಕೊರೊನಾಗೆ ಸಂಬಂಧಿಸಿದ ವೈಜ್ಞಾನಿಕ ಹೆಸರುಗಳು ಬದಲಾಗುವುದಿಲ್ಲ. ಆದರೆ, ಸಾರ್ವಜನಿಕರ ಚರ್ಚೆಗಾಗಿ ಬೇರೆ ಹೆಸರುಗಳನ್ನು ಬಳಸಲಾಗುವುದು ಎಂದಿದ್ದಾರೆ.

ಇದರಿಂದಾಗಿ ರೂಪಾಂತರಿಗಳ ಹೆಸರು ನೆನಪಿಟ್ಟುಕೊಳ್ಳುವುದು ಸುಲಭ ವಾಗಲಿದೆ. ರೂಪಾಂತರಿಗಳನ್ನು ಮೊದಲು ಪತ್ತೆ ಮಾಡಿದ ದೇಶಕ್ಕೆ ಪಕ್ಷಪಾತಿ ಹಾಗೂ ಕಳಂಕ ಮಾಡುವುದು ತಪ್ಪುತ್ತದೆ ಎಂದು ಡಾ. ಮಾರಿಯ ಹೇಳಿದ್ದಾರೆ.

ಬ್ರಿಟನ್‌ನಲ್ಲಿ ಮೊದಲು ಪತ್ತೆ ಮಾಡಲಾದ ಬಿ.1.1.7 ರೂಪಾಂತರಿಗೆ ಅಲ್ಫಾ ಎಂಬ ಹೆಸರಿಡಲಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಪತ್ತೆ ಮಾಡಲಾದ ಬಿ.1.351 ರೂಪಾಂತರಿಗೆ ಬೀಟಾ, ಬ್ರೆಜಿಲ್‌ನಲ್ಲಿ ಪತ್ತೆ ಮಾಡಲಾದ ಜಿ.1 ರೂಪಾಂತರಿಗೆ ಗಾಮ್ಮಾ ಮತ್ತು ಪಿ2 ರೂಪಾಂತರಿಗೆ ಜೆಟಾ ಎಂಬ ಹೆಸರಿಡಲಾಗಿದೆ. ಅಮೆರಿಕದಲ್ಲಿ ಪತ್ತೆ ಮಾಡಲಾದ ರೂಪಾಂತರಿಗೆ ಎಪ್ಸಿಲೊನಿ ಹಾಗೂ ಲೊಟಾ ಎಂಬ ಹೆಸರಿಡಲಾಗಿದೆ.

# 'ಜ್ಯೋತಿ ಸಂಜೀವಿನಿ ಯೋಜನೆ'ಯನ್ನು ಸ್ಥಳೀಯ ಸಂಸ್ಥೆ ನೌಕರರಿಗೂ ವಿಸ್ತರಿಸಿ



ದಾವಣಗೆರೆ, ಜೂ.1- ಪುರಸಭೆ, ಪಟ್ಟಣ ಪಂಚಾಯ್ತಿ, ನಗರಸಭೆ, ಮಹಾನಗರ ಪಾಲಿಕೆಗಳ ಅಧಿಕಾರಿಗಳು ಹಾಗೂ ನೌಕರರಿಗೆ 'ಜ್ಯೋತಿ ಸಂಜೀವಿನಿ' ಯೋಜನೆಯನ್ನು ವಿಸ್ತರಿಸುವಂತೆ ಮಹಾನಗರ ಪಾಲಿಕೆ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆ.ಎಸ್. ಗೋವಿಂದರಾಜ್ ಒತ್ತಾಯಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ 'ಸಿ' ಮತ್ತು 'ಡಿ' ದರ್ಜೆ ನೌಕರರು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಅದರಲ್ಲಿಯೂ ಪಾಲಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಜವಾನರು, ಪೌರ ಕಾರ್ಮಿಕರು, ವಾಹನ ಚಾಲಕರು, ವಾಲ್‌ಮನ್‌ಗಳು, ಲೋಡರ್ಸ್, ಕ್ಲೀನರ್‌ಗಳು ನಿತ್ಯ ನಗರ ಸ್ವಚ್ಛತೆಯಲ್ಲಿ ತೊಡಗಿದ್ದು, ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಆದಕಾರಣ ಇವರುಗಳಿಗೆ ಅನ್ವಯವಾಗುವಂತೆ 'ಜ್ಯೋತಿ ಸಂಜೀವಿನಿ' ಯೋಜನೆ ವಿಸ್ತರಿಸಲು ಮನವಿ ಮಾಡಿದ್ದಾರೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಎಸ್. ಹೆಚ್. ಗುರುಮೂರ್ತಿ, ಬಿ.ವೆಂಕಟರಾಮ್, ಟಿ.ಸಿ. ಬಸವರಾಜಯ್ಯ, ಎಸ್.ಕೆ. ನಾಮದೇವ್, ಹಾಲೇಶ್, ಯು. ಮೂರ್ತಿ, ಬಿ. ವಿನಾಯಕ ಮತ್ತಿತರರಿದ್ದರು.

# ವಾರಿಯರ್ಸ್‌ಗೆ ಅನ್ನ ಸಂತರ್ಪಣೆ



ದಾವಣಗೆರೆ, ಜೂ.1- ಜಿಲ್ಲಾ ಅಸಂಘಟಿತ ಕಾರ್ಮಿಕ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಕೆ.ಲಿಯಾಖತ್ ಅಲಿ ಅವರ ಜನ್ಮ ದಿನದ ಅಂಗವಾಗಿ ನಗರದ ಚಿಗಟೇರಿ ಸಾರ್ವಜನಿಕ ಆಸ್ಪತ್ರೆ ಆವರಣ, ಹೆರಿಗೆ ಆಸ್ಪತ್ರೆಯ ಆವರಣದಲ್ಲಿ ಕೊರೊನಾ ರೋಗಿಗಳಿಗೆ ಹಾಗೂ ಅವರ ಸಂಬಂಧಿಕರಿಗೆ ಮತ್ತು ಕರ್ತವ್ಯ ನಿರತ ಆರಕ್ಷಕರಿಗೆ, ಬೀದಿ ಬದಿ ಇರುವ ನಿರ್ಗತಿಕ ಸೇರಿದಂತೆ 200 ಕ್ಕೂ ಹೆಚ್ಚು ಜನರಿಗೆ ಊಟ ಹಾಗೂ ನೀರಿನ ಬಾಟಲ್ ವಿತರಿಸಿದರು.

ಪ್ರದೇಶ ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಸೈಯದ್ ಖಾಲಿದ್ ಅಹ್ಮದ್, ಕಿಸಾನ್ ಕಾಂಗ್ರೆಸ್‌ನ ಮೊಹಮ್ಮದ್ ಜಿಕ್ರಿಯಾ, ಅಲ್ಪಸಂಖ್ಯಾತರ ಘಟಕದ ರಿಯಾಜುದ್ದೀನ್, ಯುವ ಮುಖಂಡರಾದ ಮಹಬೂಬ್ ಬಾಷಾ, ಫಜ್ಲೂರ್ ರೆಹಮಾನ್, ನದೀಂ ಹಾಗೂ ಇನ್ನಿತರರು ಈ ಸಂದರ್ಭದಲ್ಲಿ ಭಾಗವಹಿಸಿ ಶುಭ ಕೋರಿದರು.

# ಮಲಬಾರ್‌ನಿಂದ ಆಹಾರ ಕಿಟ್



ದಾವಣಗೆರೆ, ಜೂ.1- ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಕರ್ನಾಟಕದಾದ್ಯಂತ ತನ್ನ ಎಲ್ಲಾ ಮಳಿಗೆಯ ತಂಡದ ಸದಸ್ಯರಿಂದ ನಿರ್ಗತಿಕ ಮತ್ತು ಕೋವಿಡ್ ಪಿಡುಗಿನಿಂದ ಬಳಲುತ್ತಿರುವ ಅಗತ್ಯ ಜನರಿಗೆ ವಿವಿಧ ಸಂಘ-ಸಂಸ್ಥೆಯ ಮೂಲಕ ಆಹಾರದ ಕಿಟ್‌ಗಳನ್ನು ವಿತರಿಸಿದ್ದಾರೆ.

# ಗ್ರಾಮೀಣರ ಬದುಕಿನ ಬಗ್ಗೆ ಕಿಂಚಿತ್ತೂ ಗೌರವವಿಲ್ಲ : ರೈತರ ಅಸಮಾಧಾನ

ದಾವಣಗೆರೆ, ಜೂ.1- ಎಷ್ಟು ಗ್ರಾಮಗಳಿಗೆ ಭೇಟಿ ಮಾಡಿದ್ದಿರಿ, ಎಷ್ಟು ಕೊರೊನಾ ಪಾಸಿಟಿವ್, ಎಷ್ಟು ಮರಣ ಎಂದು 7 ದಿನದ ಒಳಗೆ ಲೆಕ್ಕ ಕೊಡಿ. ಇಲ್ಲವಾದರೆ ನಿಮ್ಮ ಕಚೇರಿ ಮುಂದೆ ಲೆಕ್ಕಕ್ಕಾಗಿ ಧರಣಿ ನಡೆಸಲಾಗುವುದು ಎಂದು ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ರಾಜ್ಯ ರೈತ ಸಂಘ ಒತ್ತಾಯದ ಜೊತೆಗೆ ಎಚ್ಚರಿಕೆ ಸಹ ನೀಡಿದೆ.

ರೈತ ಸಂಘವು ಒಂದು ವರ್ಷದಿಂದ ಗ್ರಾಮೀಣ ಪ್ರದೇಶದ ಶವಗಳನ್ನು ಪರೀಕ್ಷೆ ಮಾಡಿ ಅಂತ್ಯ ಸಂಸ್ಕಾರ ಮಾಡಿ ಎಂದು ಸಲಹೆ ನೀಡಿದೆ. ಆದರೆ ಸಂಘದ ಸಲಹೆಗಳನ್ನು ಅಲಕ್ಷೆ ಮಾಡಲಾಗುತ್ತಿದೆ. ಜಿಲ್ಲಾ ಪಂಚಾಯತ್ ಸಿಇಓ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ಜಿಲ್ಲಾ ಮತ್ತು ತಾಲ್ಲೂಕುಗಳ ಅಧಿಕಾರಿಗಳು ಈವರೆವಿಗೂ ಗ್ರಾಮೀಣ ಪ್ರದೇಶಕ್ಕೆ ಕರ್ತವ್ಯ ಲೋಪ ಎಸಗಿದ್ದು, ಗ್ರಾಮೀಣರ ಬದುಕಿನ ಬಗ್ಗೆ ಅಧಿಕಾರಿಗಳಿಗೆ ಕಿಂಚಿತ್ತೂ ಗೌರವವಿಲ್ಲ ಎಂದು ಸಂಘದ ರಾಜ್ಯ ಕಾರ್ಯದರ್ಶಿ ಬಲ್ಲೂರ್ ರವಿಕುಮಾರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣರಿಗೆ ಒತ್ತು ಕೊಡಬೇಕು ಎಂಬ ಸರ್ಕಾರದ ಮಾತು ಕೇವಲ ಮಾತಾಗಿದೆ. ಕೂಡಲೇ ಗ್ರಾಮೀಣರ ಬಗ್ಗೆ ಒತ್ತು ನೀಡುವಂತೆ ಜಿಲ್ಲಾ ಪಂಚಾಯತ್ ಸಿಇಓ ಅವರಿಗೆ ಅಣಬೇರು ಕುಮಾರಸ್ವಾಮಿ, ಪ್ರಸಾದ್ ಕಬ್ಬಳ, ಇಟಗಿ ಬಸವರಾಜಪ್ಪ, ಪಾಮೇನಹಳ್ಳಿ ಲಿಂಗರಾಜ್, ಗೌಡರ ಅಶೋಕ್ ಮಾಯಕೊಂಡ, ಪ್ರತಾಪ ಮಾಯಕೊಂಡ, ನಿಂಗಣ್ಣ ಮಾಯಕೊಂಡ, ಬಲ್ಲೂರ್ ಪರಶುರಾಮ ರೆಡ್ಡಿ ಆಗ್ರಹಿಸಿದ್ದಾರೆ.

# ಪ್ಲಾಂಟ್ ಕಾರ್ಯಾರಂಭ

**(1ನೇ ಪುಟದಿಂದ)** ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ನಾಗರಾಜ್, ಬಿಜೆಪಿ ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್. ಲಕ್ಷ್ಮಿ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರ ಮೋಹನ್, ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಹೆಚ್. ಹನುಮ ನಾಯ್ಕ್, ತಾ.ಪಂ. ಇಓ ಗಂಗಾ ಧರನ್, ಲಿಂಗರಾಜ್, ನಗರಸಭೆ ಉಪಾಧ್ಯಕ್ಷ ಬಾಬುಲಾಲ್, ಸದಸ್ಯರಾದ ಅಶ್ವಿನಿ ಕೃಷ್ಣ, ವಿಜಯಕುಮಾರ್, ರಜನೀಕಾಂತ್, ನೀತಾ ಮೆಹರ್ವಾಡೆ ಹಾಗೂ ಬಿಜೆಪಿ ಪಕ್ಷದ ಮುಖಂಡರು ಹಾಜರಿದ್ದರು.

# ಸಿಬಿಎಸ್‌ಇ ಪರೀಕ್ಷೆ ರದ್ದು

**(1ನೇ ಪುಟದಿಂದ)** ಕೊರೊನಾದಿಂದ ಶೈಕ್ಷಣಿಕ ವರ್ಷದ ಮೇಲೆ ಪರಿಣಾಮವಾಗಿದೆ. ಮಂಡಳಿ ಪರೀಕ್ಷೆಗಳಿಂದ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರ ಮೇಲೆ ಅಪಾರ ಒತ್ತಡವಾಗುತ್ತದೆ. ಇದಕ್ಕೆ ಅಂತ್ಯ ಹಾಡಬೇಕು ಎಂದು ಪ್ರಧಾನಿ ಸಭೆಗೆ ತಿಳಿಸಿದರು.

ಪರಿಸ್ಥಿತಿ ಬದಲಾಗುತ್ತಿದೆ. ಕೆಲ ರಾಜ್ಯಗಳಲ್ಲಿ ಕೊರೊನಾ ಪ್ರಕರಣಗಳು ಇಳಿಯುತ್ತಿವೆ. ಕೆಲ ರಾಜ್ಯಗಳು ಮೈಕ್ರೋ ಕಂಟೈನ್‌ಮೆಂಟ್‌ಗೆ ಮುಂದಾಗಿದ್ದರೆ, ಇನ್ನು ಕೆಲ ರಾಜ್ಯಗಳು ಲಾಕ್‌ಡೌನ್ ಆಯ್ಕೆ ಮಾಡಿಕೊಂಡಿವೆ. ಇಂತಹ ಪರಿಸ್ಥಿತಿಯಲ್ಲಿ ಪೋಷಕರು ವಿದ್ಯಾರ್ಥಿಗಳ ಆರೋಗ್ಯದ ಕುರಿತು ಹೊಂದಿರುವ ಕಳವಳ ಸಹಜವಾದದ್ದು. ಇಂತಹ ಒತ್ತಡದ ಪರಿಸ್ಥಿತಿಯಲ್ಲಿ ಪರೀಕ್ಷೆಗೆ ಹಾಜರಾಗಲು ಬಲವಂತಪಡಿಸಬಾರದು ಎಂದು ಸಭೆಯಲ್ಲಿ ನಿರ್ಧರಿಸಲಾಗಿದೆ.

# 12ನೇ ತರಗತಿ ಪರೀಕ್ಷೆ ರದ್ದು

**(1ನೇ ಪುಟದಿಂದ)** ರದ್ದುಗೊಳಿಸಲಾಗಿದೆ. ಪರ್ಯಾಯ ಮೌಲ್ಯಮಾಪನ ವಿಧಾನವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದವರು ಹೇಳಿದ್ದಾರೆ. ಸಿ.ಬಿ. ಎಸ್.ಇ. 12ನೇ ತರಗತಿ ಪರೀಕ್ಷೆಗಳನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದ ಬೆನ್ನಲ್ಲೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿರುವ ಅವರು, ರಾಜ್ಯ ಪಠ್ಯಕ್ರಮ ಅನುಸರಿಸಿ ಓದುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಸ್ಥಿತಿಗತಿಗಳು, ಮೌಲ್ಯಮಾಪನದ ಅವಶ್ಯಕತೆ ಕುರಿತಂತೆ ಈಗಾಗಲೇ ರೂಪಿತವಾಗಿರುವ ಅಭಿಪ್ರಾಯಗಳ ವಿಸ್ತೃತ ಚರ್ಚೆ ನಡೆಸಿ ವಿದ್ಯಾರ್ಥಿಗಳ ಆರೋಗ್ಯ ಹಾಗೂ ಭವಿಷ್ಯದ ಹಿತದೃಷ್ಟಿಯಿಂದ ಶೀಘ್ರದಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

# ಸಾರ್ವಜನಿಕ ರುದ್ರಭೂಮಿಯಲ್ಲಿ ಸ್ವಚ್ಛತಾ ಕಾರ್ಯಕ್ರಮ



ದಾವಣಗೆರೆ, ಜೂ.1- ಇಲ್ಲಿನ ಗಾಂಧಿನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ನಡೆಸಲಾಯಿತು. ಮಹಾನಗರ ಪಾಲಿಕೆಯ ಆರೋಗ್ಯ ಮತ್ತು ಶಿಕ್ಷಣ ಸಾರ್ವಜನಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ.ಗೋಣೆಪ್ಪ ಅವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಪಾಲಿಕೆಯ ಇನ್‌ಸ್ಪೆಕ್ಟರ್ ಮದನ್ ಕುಮಾರ್, ಎಲ್.ಜಿ.ಬಸವರಾಜ್, ನಾಗರಾಜ್, ಉಮೇಶ್ ಹಾಗೂ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಕೋಡಿರಂಗವ್ವನಹಳ್ಳಿ ಮೊರಾರ್ಜಿ ಶಾಲೆಯಲ್ಲಿ ಕೋವಿಡ್ ಕೇರ್ ಸೆಂಟರ್

ಭರಮಸಾಗರ, ಜೂ.1- ಸಮೀಪದ ಬಿದರಕೆರೆ ರಸ್ತೆಯ ಕೋಡಿರಂಗವ್ವನಹಳ್ಳಿಯ ಮೊರಾರ್ಜಿ ವಸತಿ ಶಾಲೆಯನ್ನು ಕೋವಿಡ್ ಕೇರ್ ಸೆಂಟರ್ ಆಗಿ ಸಿದ್ಧಪಡಿಸಲಾಗಿದ್ದು, ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ತಹಶೀಲ್ದಾರ್ ವೆಂಕಟೇಶಯ್ಯ ತಿಳಿಸಿದ್ದಾರೆ.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಗಿರೀಶ್ ಮಾತನಾಡಿ, ಇಲ್ಲಿ80 ಹಾಸಿಗೆಗಳನ್ನು ಹೊಂದಿದ 2 ಕೊಠಡಿಗಳನ್ನು ಕೋವಿಡ್ ಸೋಂಕಿತರಿಗಾಗಿ ಸಿದ್ದಪಡಿಸಲಾಗಿದೆ. ವಸತಿ ಶಾಲೆ, ಕಂದಾಯ, ಆರೋಗ್ಯ ಇಲಾಖೆಗಳ ಸಿಬ್ಬಂದಿ ಕೇಂದ್ರ ನಿರ್ವಹಣೆ ಜವಾಬ್ದಾರಿ ನಿರ್ವಹಿಸಲಿದ್ದಾರೆ ಎಂದರು.

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮಮತಾ, ಕಂದಾಯ ಇಲಾಖೆ ತಿಪ್ಪೇಸ್ವಾಮಿ, ಗ್ರಾಮ ಲೆಕ್ಕಾಧಿಕಾರಿ ಪ್ರಸನ್ನಕುಮಾರ್ ಹಾಗೂ ಮೊರಾರ್ಜಿ ವಸತಿ ಶಾಲೆ ಸಿಬ್ಬಂದಿ ಉಪಸ್ಥಿತರಿದ್ದರು.

# 436 ಗುಣಮುಖ, 5 ಸಾವು

**(1ನೇ ಪುಟದಿಂದ)** ದಾವಣಗೆರೆಯಲ್ಲಿ 69, ಹರಿಹರ 20, ಜಗಳೂರು 18, ಚನ್ನಗಿರಿ 19, ಹೊನ್ನಾಳಿ 47 ಹಾಗೂ ಹೊರ ಜಿಲ್ಲೆಯ ಐವರಲ್ಲಿ ಸೋಂಕು ಕಾಣಿಸಿಕೊಂಡಿದೆ. ದಾವಣಗೆರೆ ತಾಲ್ಲೂಕು ಕೈದಾಳೆ ಗ್ರಾಮದ 80 ವರ್ಷದ ಮಹಿಳೆ, 75 ವರ್ಷದ ಪುರುಷ, ಕನಗೊಂಡನಹಳ್ಳಿಯ 51ರ ಪುರುಷ, ಜಗಳೂರು ಎಂ. ಮಾಚಿಕೆರೆ ಗ್ರಾಮದ 60 ವರ್ಷದ ಮಹಿಳೆ, ಹರಿಹರ ತಾಲ್ಲೂಕು ಹೊಸಪೇಟೆ ಬೀದಿಯ 65 ವರ್ಷದ ಪುರುಷ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. ಜಿಲ್ಲೆಯಲ್ಲಿ 4051 ಸಕ್ರಿಯ ಪ್ರಕರಣಗಳಿದ್ದು, ಈ ವರೆಗೆ 361 ಜನರು ಸಾವನ್ನಪ್ಪಿದ್ದಾರೆ.

# ಹಣಕಾಸನ್ನೂ ಪರಿಗಣಿಸಬೇಕು

**(1ನೇ ಪುಟದಿಂದ)** ಸಚಿವ ಬೈರತಿ, ವಾರಕ್ಕೆ ಎರಡು ಬಾರಿ ಜಿಲ್ಲೆಯಲ್ಲಿದ್ದೇನೆ. ದಾವಣಗೆರೆ ಜಿಲ್ಲೆಯ ಜನಪ್ರತಿನಿಧಿ ಎಂದೇ ಭಾವಿಸಿಕೊಂಡಿದ್ದೇನೆ ಎಂದರು. ಕಳೆದ 20 ವರ್ಷಗಳ ಇತಿಹಾಸ ನೋಡಿ. ಯಾವೊಬ್ಬ ಉಸ್ತುವಾರಿ ಸಚಿವ ನನ್ನ ರೀತಿಯಲ್ಲಿ ಸ್ಪಂದನೆ ಮಾಡಿಲ್ಲ ಎಂದ ಅವರು, ನನಗೆ ಇದೊಂದೇ ಜಿಲ್ಲೆಯಲ್ಲದೇ ಸಚಿವನಾಗಿ ಇಡೀ ರಾಜ್ಯದ ಜವಾಬ್ದಾರಿ ಇದೆ. ಪ್ರತಿದಿನ ಪಾಲಿಕೆಗಳ ಅಧಿಕಾರಿಗಳನ್ನು ಸಂಪರ್ಕಿಸಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಇಲಾಖೆಗಳ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದೇನೆ ಎಂದರು.

# ಔಷಧಿ ಸಾಲದು: ಸುಧಾಕರ್

**(1ನೇ ಪುಟದಿಂದ)** ನೋಡಿಕೊಳ್ಳಬೇಕು. ಮೊದಲು ದಂತ ಪರೀಕ್ಷೆ ಮಾಡುತ್ತಾರೆ. ಬಳಿಕ ಕಣ್ಣಿನ ತಜ್ಞರು ಎಲ್ಲಾ ಸೇರಿ ಪರೀಕ್ಷೆ ಮಾಡುತ್ತಾರೆ ಎಂದು ಅವರು ಹೇಳಿದರು. ಮೂರು ಲಕ್ಷ ಕೋವಿಡ್ ಲಸಿಕೆ ಡೋಸ್ ಬಂದಿದೆ. ಎರಡನೇ ಡೋಸ್ ನೀಡಲು ಸಹಾಯವಾಗುತ್ತಿದೆ ಎಂದವರು ತಿಳಿಸಿದರು.

# ಪಠ್ಯಕ್ರಮದ ಬಗ್ಗೆ ತೀರ್ಮಾನ

**(1ನೇ ಪುಟದಿಂದ)** ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿರುವ ಅವರು, ರಾಜ್ಯ ಪಠ್ಯಕ್ರಮ ಅನುಸರಿಸಿ ಓದುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಸ್ಥಿತಿಗತಿಗಳು, ಮೌಲ್ಯಮಾಪನದ ಅವಶ್ಯಕತೆ ಕುರಿತಂತೆ ಈಗಾಗಲೇ ರೂಪಿತವಾಗಿರುವ ಅಭಿಪ್ರಾಯಗಳ ವಿಸ್ತೃತ ಚರ್ಚೆ ನಡೆಸಿ ವಿದ್ಯಾರ್ಥಿಗಳ ಆರೋಗ್ಯ, ಭವಿಷ್ಯದ ಹಿತದೃಷ್ಟಿಯಿಂದ ಶೀಘ್ರದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

# ಲಸಿಕೆ ಪಡೆದವರು ಸೇವೆಗೆ

**(1ನೇ ಪುಟದಿಂದ)** ದೊರೆಯಲಿದೆ. ಸೇವೆ ಆರಂಭದ ನಂತರ ಯಾರು ಲಸಿಕೆ ಪಡೆದಿರುತ್ತಾರೋ ಅಂತಹ ವರಿಗೆ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಲಾಗುವುದು ಎಂದರು. ಸಾರಿಗೆ ಸಂಸ್ಥೆಯ ನಾಲ್ಕೂ ನಿಗಮಗಳ ನೌಕರರಿಗೂ ಇಲಾಖಾ ವತಿಯಿಂದಲೇ ಲಸಿಕೆ ನೀಡಲಾಗುವುದು. ಈಗಾಗಲೇ ಶೇ. 30 ರಿಂದ 40 ರಷ್ಟು ಮಂದಿ ಲಸಿಕೆ ಪಡೆದುಕೊಂಡಿದ್ದಾರೆ ಎಂದು ಮಾಹಿತಿ ನೀಡಿದರು.

# ಆರೋಗ್ಯ ಸಿಬ್ಬಂದಿಗಳ ನೇಮಕ

ದಾವಣಗೆರೆ, ಜೂ.1- ಕೊರೊನಾ ಮಹಾಮಾರಿಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಹೆಚ್ಚಿನ ಸಹಾಯಕ ಆರೋಗ್ಯ ಸಿಬ್ಬಂದಿಗಳನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಸಚಿವಾಲಯವು ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ-3.0 ಅಡಿಯಲ್ಲಿ ತರಬೇತಿ ನೀಡಿ, ನೇಮಿಸಿಕೊಳ್ಳಲು ಸೂಚಿಸಲಾಗಿದೆ.

ನಿಗದಿಪಡಿಸಿರುವ ಕೋರ್ಸ್‌ಗಳಿಗೆ ಆಸಕ್ತಿ ಹೊಂದಿರುವ ಅಭ್ಯರ್ಥಿಗಳು ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿ, ದಾವಣಗೆರೆ-ಫೋನ್: 08192-259447, 7892956667 ಹಾಗೂ ಮೂಲಕ ನೋಂದಣಿ ಮಾಡಿಕೊಳ್ಳಲು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಎನ್. ಏಕನಾಥ್ ತಿಳಿಸಿದ್ದಾರೆ.

# 26ನೇ ವಾರ್ಡ್‌ನಲ್ಲಿ ಲಸಿಕೆ ವಿತರಣೆ



ದಾವಣಗೆರೆ, ಜೂ. 1- ಮಹಾನಗರ ಪಾಲಿಕೆ ವ್ಯಾಪ್ತಿಯ 26ನೇ ವಾರ್ಡ್ ಕೆಟಿಜೆ ನಗರದಲ್ಲಿ ಕರ್ನಾಟಕ ಎಜುಕೇಷನಲ್ ಅಂಡ್ ವೆಲ್‌ಫೇರ್ ಅಸೋಸಿಯೇಷನ್ ವತಿಯಿಂದ ನಾಗರಿಕರಿಗೆ ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಅಸೋಸಿಯೇಷನ್ ಪದಾಧಿಕಾರಿಗಳಾದ ಅಬ್ದುಲ್ ಲತೀಫ್, ನಾಸೀರ್ ಹುಸೇನ್, ಅಸ್ಮತ್ ಅಮಿನ್, ತಜಮ್ಮುಲ್ ಅಹ್ಮದ್, ಜಾವೀದ್ ಪಟೇಲ್, ಆಸೀಫ್ ಅಲಿ, ಜಬೀವುಲ್ಲಾ, ಜಾಕೀರ್ ಹುಸೇನ್, ಇಮ್ತಿಯಾಜ್ ಅಹ್ಮದ್, ಆರೀಫ್ ಅನ್ಸಾರಿ, ಕೆ. ಮುನಾವರ್, ಸೈಫುಲ್ಲಾ, ಹಾಫೀಜ್ ಮತ್ತಿತರರಿದ್ದರು.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ಜಿ. ಶಶಿಶೇಖರ್ ಬಿನ್ ವಿಶ್ವನಾಥ್ ಗದಗಿಮಠ, ವಾಸ : #2611, 3ನೇ ಮುಖ್ಯರಸ್ತೆ, 'ಡಿ' ಅಡ್ಡರಸ್ತೆ, ಎಸ್.ಎಸ್. ಬಡಾವಣೆ, 'ಬಿ' ಬ್ಲಾಕ್, ದಾವಣಗೆರೆ. ಮೊ. : 8618337835 ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕರುಗಳಾದ ಶ್ರೀಮತಿ ಎಸ್. ನೀಲಮ್ಮ ಕೋಂ ಲೇಟ್ ಎಸ್.ಸಿ. ತಿರುಕಪ್ಪ ಮತ್ತು ಇವರ ಮಕ್ಕಳುಗಳಾದ ಶ್ರೀ ಎಸ್.ಟಿ. ಮಹಾರುದ್ರಪ್ಪ, ಶ್ರೀಮತಿ ಎಸ್. ಪುಷ್ಪಾ, ಶ್ರೀಮತಿ ಎಸ್. ಗೀತಾ, ಶ್ರೀಮತಿ ಎಸ್. ನಾಗರತ್ನ, ಶ್ರೀಮತಿ ಎಸ್. ಸುಧಾ, ಶ್ರೀಮತಿ ಎಸ್. ಸವಿತಾ ಮತ್ತು ಶ್ರೀ ಎಸ್.ಆರ್. ವೀರೇಶ್ ಬಿನ್ ಎಸ್.ಟಿ. ಮಹಾರುದ್ರಪ್ಪ ಎಲ್ಲರ ವಾಸ # 617/2, 7ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ ಸಿಟಿ ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಸಾರ್ವಜನಿಕರು ಯಾರೇ ಆಗಲಿ ತಂಟೆ, ತಕರಾರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇದ್ದಲ್ಲಿ, ಈ ಪ್ರಕಟಣೆ ಪ್ರಕಟಗೊಂಡ ಒಂದು ವಾರದೊಳಗಾಗಿ ಈ ಕೆಳಕಂಡ ವಕೀಲರನ್ನಾಗಲೀ ಅಥವಾ ನನ್ನ ಕಕ್ಷಿದಾರರನ್ನಾಗಲಿ ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು. ಒಂದು ವಾರದೊಳಗಾಗಿ ಯಾವುದೇ ರೀತಿಯ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. **ಷೆಡ್ಯೂಲ್ : ದಾವಣಗೆರೆ ಸಿಟಿ, ಪಿ.ಜೆ. ಬಡಾವಣೆ, 7ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಡೋರ್ ನಂ. 617/2 & 2ಎ ರ ವಿಸ್ತೀರ್ಣ ಪೂರ್ವ-ಪಶ್ಚಿಮ 69* ಅಡಿ ಮತ್ತು ಉತ್ತರ-ದಕ್ಷಿಣ 18* ಅಡಿಯುಳ್ಳ (69'x18) ಸ್ವತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ : ಕನ್ಸರ್‌ವೆನ್ಸಿ, ಪಶ್ಚಿಮಕ್ಕೆ : 7ನೇ ಮುಖ್ಯರಸ್ತೆ, ಉತ್ತರಕ್ಕೆ : ಲೇಟ್ ಎಸ್.ಸಿ. ಮಲ್ಲಿಕಾರ್ಜುನಪ್ಪನವರ ಮನೆ, ದಕ್ಷಿಣಕ್ಕೆ : ಡಿ.ಎಸ್. ಕೃಷ್ಣಪ್ಪ ಇವರ ಮನೆ ಈ ಮಧ್ಯೆ ಇರುವ ಸ್ವತ್ತು.**

**ಸಹಿ/- (ಆರ್.ಟಿ. ವಿನಯ್ ಕುಮಾರ್), ವಕೀಲರು**
**# 82/18, ಪಿ.ಬಿ. ರಸ್ತೆ, ಇಂಡಿಯನ್ ಬ್ಯಾಂಕ್, ಹತ್ತಿರ, ದಾವಣಗೆರೆ.**

## ಜಿಲ್ಲಾಸ್ಪತ್ರೆಯಲ್ಲಿ 2ನೇ ಡೋಸ್ ಕೋವ್ಯಾಕ್ಸಿನ್ ಲಸಿಕೆ

ದಾವಣಗೆರೆ, ಜೂ. 01- ಭಾರತ ಸರ್ಕಾರದಿಂದ ಸರಬರಾ ಜಾಗಿರುವ ಲಸಿಕೆಗಳಲ್ಲಿ ಜಿಲ್ಲೆಯಲ್ಲಿ ಭಾನುವಾರ ಹೊರತು ಪಡಿಸಿ ಪ್ರತಿ ದಿನ ಕೋವ್ಯಾಕ್ಸಿನ್ 2 ನೇ ಡೋಸ್ ಲಸಿಕೆಯನ್ನು ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ನೀಡಲಾಗುತ್ತಿದ್ದು, ಅರ್ಹ ಫಲಾನುಭವಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ನಗರ, ಗ್ರಾಮೀಣ ಪ್ರದೇಶಗಳ ಆರೋಗ್ಯ ಕೇಂದ್ರ ಗಳಲ್ಲಿ ಪ್ರಥಮ ಆದ್ಯತೆಯ ಮೇರೆಗೆ ಜೂ. 2, 3 ರಂದು 2 ದಿನ ಅಂಗವಿಕಲರಿಗೆ ಮೊದಲನೇ ಮತ್ತು ಎರಡನೇ ಡೋಸ್ ಲಸಿಕೆಯನ್ನು ಲಭ್ಯತೆಗ ನುಗುಣವಾಗಿ ನೀಡಲಾಗುವುದು ಎಂದು ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ.ಮೀನಾಕ್ಷಿ ತಿಳಿಸಿದ್ದಾರೆ.

## ದಿಲೀಪ್, ರಾಜ್‌ಕಪೂರ್ ಮನೆ ವಸ್ತು ಸಂಗ್ರಹಾಲಯ ಆಗಿ ಪರಿವರ್ತನೆ

ಪೆಷಾವರ, ಜೂ. 1 – ಬಾಲಿವುಡ್ ನಟರಾದ ದಿಲೀಪ್ ಕುಮಾರ್ ಹಾಗೂ ರಾಜ್ ಕಪೂರ್ ಅವರ ಪೂರ್ವಿಕರ ಮನೆಗಳನ್ನು ಖರೀದಿಸಿ ಅವುಗಳನ್ನು ಸಂಗ್ರಹಾಲಯಗಳಾಗಿ ಪರಿವರ್ತಿಸಲು ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತೀಯ ಸರ್ಕಾರ ನಿರ್ಧರಿಸಿದೆ. ಎರಡೂ ಮನೆಗಳ ಮಾಲೀಕರು ವ್ಯಕ್ತಪಡಿಸಿರುವ ಆಕ್ಷೇಪಗಳನ್ನು ತಳ್ಳಿ ಹಾಕಿರುವ ಪೇಷಾವರ ಜಿಲ್ಲಾಧಿಕಾರಿ ಖಲೀದ್ ಮೆಹಮೂದ್, ಮನೆಗಳನ್ನು ಪುರಾತತ್ವ ಇಲಾಖೆಗೆ ವಹಿಸುವುದಾಗಿ ಹೇಳಿದ್ದಾರೆ.

# ಲಸಿಕೆಗೆ ನಿಂತ ಜನ: ಪಾಲಿಕೆ ಸದಸ್ಯೆ ಮೇಲೆ ರೇಗಾಡಿದ ಜಿಲ್ಲಾ ಸಚಿವರು

ದಾವಣಗೆರೆ, ಜೂ.1- ಎರಡನೇ ಲಸಿಕೆಗಾಗಿ ಜನ ನಿಂತಿರುವುದನ್ನು ಕಂಡು ವಿಷಯ ಅರಿಯದೇ ಜಿಲ್ಲಾ ಉಸ್ತುವಾರಿ ಸಚಿವರು ವಿನಾಕಾರಣ ನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಮೇಲೆ ರೇಗಾಡಿ ಕಾಂಗ್ರೆಸ್ ಯುವ ಮುಖಂಡ, ಕಾರ್ಯಕರ್ತರಿಂದ ತೀವ್ರ ಪ್ರತಿರೋಧ ಎದುರಿಸುವ ಮೂಲಕ ಮುಖಭಂಗ ಅನುಭವಿಸಿದ ಘಟನೆ ನಗರದಲ್ಲಿ ಇಂದು ಬೆಳಿಗ್ಗೆ ನಡೆಯಿತು.

ನಿಟುವಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂದೆ ಜನದಟ್ಟಣೆ ಕಡಿಮೆ ಮಾಡಲೆಂಬ ಸದುದ್ದೇಶದಿಂದ ಸುತ್ತಮುತ್ತಲಿನ ಐದೂ ವಾರ್ಡುಗಳ ಸದಸ್ಯರು, ಬಿಜೆಪಿ-ಕಾಂಗ್ರೆಸ್ ಮುಖಂಡರು ಪರಸ್ಪರ ಚರ್ಚಿಸಿ, ಶಾಲೆಯವರೊಂದಿಗೆ ಮಾತನಾಡಿ, ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ವ್ಯವಸ್ಥಿತವಾಗಿ 2-3 ಲಸಿಕಾ ದಿನಗಳನ್ನು ಕಳೆದಿದ್ದರು. ಐದೂ ವಾರ್ಡ್‌ಗಳಿಂದ ಸಾವಿರಾರು ಜನರು ಈವರೆಗೆ ಲಸಿಕೆ ಹಾಕಿಸಿಕೊಂಡಿದ್ದರೂ ಆಗದ ಸಮಸ್ಯೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಭೈರತಿ ಅವರಿಗೆ ಏನು ಕಂಡಿತೋ ಪಕ್ಕದಲ್ಲೇ ಇದ್ದ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರೂ ಆದ ಮಾಜಿ ಮೇಯರ್ ಡಿ.ಎಸ್.ಉಮಾ ಪ್ರಕಾಶ್ ಅವರ ಮೇಲೆ ರೇಗಾಡಿದ್ದಾರೆ.

ಅಷ್ಟರಲ್ಲಿ ಅದನ್ನೆಲ್ಲಾ ಗಮನಿಸಿದ ಸ್ಥಳದಲ್ಲೇ ಇದ್ದ ಕಾಂಗ್ರೆಸ್ ಯುವ ಮುಖಂಡ ಗಣೇಶ ಹುಲ್ಮನಿ ಅವರು ಉಮಾ ಪ್ರಕಾಶ್ ಅವರ ನೆರವಿಗೆ ಧಾವಿಸಿದ್ದಾರೆ. ಇಷ್ಟೊಂದು ಜನರಿಗೆ ನಿತ್ಯವೂ ಲಸಿಕೆ ಹಾಕಿಸಲು ನಾವೆಲ್ಲಾ ಸದಸ್ಯರು, ಕಾಂಗ್ರೆಸ್-ಬಿಜೆಪಿಯವರು ಪಕ್ಷಾತೀತವಾಗಿ ಬೆಳಿಗ್ಗೆ 6 ಗಂಟೆಯಿಂದ ಬಂದು, ಲಸಿಕೆ ಕಾರ್ಯ ಮುಗಿಯುವ ಮಧ್ಯಾಹ್ನದವರೆಗೂ ಇದ್ದು, ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತೇವೆ. ಯಾವಾಗಲೋ ಒಮ್ಮೆ ಜಿಲ್ಲೆಗೆ ಬರುವ ನಿಮಗೆ ದಾವಣಗೆರೆ ಮತ್ತು ಜಿಲ್ಲೆಯ ಸಮಸ್ಯೆಗಳ ಬಗ್ಗೆ ಅರಿವಿಲ್ಲದೇ ಹೀಗೆಲ್ಲಾ ರೇಗಾಡುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ಪಕ್ಷಾತೀತವಾಗಿ ಸಾವಿರಾರು ಜನರಿಗೆ ವ್ಯವಸ್ಥಿತವಾಗಿ ಲಸಿಕೆ ಹಾಕುತ್ತಿರುವ ನಿಟುವಳ್ಳಿ ಭಾಗದ ಪಾಲಿಕೆ ಸದಸ್ಯರು, ಮುಖಂಡರು, ಕಾರ್ಯಕರ್ತರು, ಆರೋಗ್ಯ ಕೇಂದ್ರದ ವೈದ್ಯರು, ಸಿಬ್ಬಂದಿ ಬಗ್ಗೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಮೆಚ್ಚುಗೆಯ ಮಾತುಗಳನ್ನಾಡಿದರು. ಜನರೊಂದಿಗೂ ಲಸಿಕೆ ಹಾಕಿಸಿಕೊಳ್ಳಿ, ಇತರರಿಗೂ ಲಸಿಕೆ ಹಾಕಿಸಿಕೊಳ್ಳುವಂತೆ ಪ್ರೇರೇಪಿಸಿ ಎಂದು ಹೇಳಿ, ತಮ್ಮ ವಾಹನದತ್ತ ಹೆಜ್ಜೆ ಹಾಕಿದರು.

ಆದರೆ, ಸಚಿವ ಭೈರತಿ ಬಸವರಾಜ ಅವರು, ವ್ಯವಸ್ಥಿತ ಲಸಿಕಾ ಕಾರ್ಯದ ಬಗ್ಗೆ ಒಂದು ಮೆಚ್ಚುಗೆ ಮಾತನಾಡದೇ, ಉಮಾ ಪ್ರಕಾಶ್‌ರ ಅವರ ಮೇಲೆ ರೇಗಾಡಿದ್ದಾರೆ. ಇದರಿಂದ ಆಕ್ರೋಶಗೊಂಡ ಉಮಾ ಪ್ರಕಾಶ್, ಇಲ್ಲಿನ ವಾಸ್ತವ ಸ್ಥಿತಿ ಅರಿಯಲಿ ಎಂಬುದಾಗಿ ನಿಮ್ಮನ್ನು ಇಲ್ಲಿಗೆ ಕರೆಸಿದ್ದೇವೆ. 5 ವಾರ್ಡ್ ಜನರಿಗೆ ಒಂದೇ ಕಡೆ ಲಸಿಕೆ ನೀಡುವುದು ಸುಲಭವಲ್ಲ. ಆದರೆ, ಇಲ್ಲಿನ ವೈದ್ಯರು, ಸಿಬ್ಬಂದಿ ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಅಚ್ಚುಕಟ್ಟಾಗಿ ಲಸಿಕೆ ಕಾರ್ಯ ಸಾಗಿದೆ. ಜನರೂ ಸಹ ಶಾಂತಿಯುತವಾಗಿ ಸರದಿಯಲ್ಲಿ ನಿಂತು ಲಸಿಕೆ ಹಾಕಿಸಿಕೊಳ್ಳುತ್ತಿದ್ದಾರೆ. ವಿನಾಕಾರಣ ತಮ್ಮ ಬಗ್ಗೆ ಹೀಗೆಲ್ಲಾ ಮಾತನಾಡಬೇಡಿ ಎಂಬುದಾಗಿ ತಿರುಗೇಟು ನೀಡಿದರು.



ಯಾವ ದಿನ ಯಾವ ಲಸಿಕೆ ನೀಡಲಾಗು ತ್ತದೆ, ಎಷ್ಟು ಲಸಿಕೆ ಪೂರೈಸಲಾಗುತ್ತಿದೆ ಎಂಬ ಮಾಹಿತಿ ಸರಿಯಾಗಿ ಇರುವುದಿಲ್ಲ. ತಡವಾಗಿ ಗೊತ್ತಾಗುವುದರಿಂದ ಲಸಿಕೆಗೆ ಟೋಕನ್ ನೀಡುವುದು ಕಷ್ಟವಾಗುತ್ತದೆ. ನಸುಕಿನ 4.30ಕ್ಕೆ ಜನ ಬಂದು ನಿಲ್ಲುತ್ತಾರೆ. 45 ವರ್ಷ ಮೇಲ್ಪಟ್ಟರು, ವಯೋವೃದ್ಧರು, ಅನಾರೋಗ್ಯಕ್ಕೆ ತುತ್ತಾದವರು, ಅಂಗವಿಕಲರು ಬಂದು ನಿಲ್ಲುತ್ತಾರೆ. ನಾವೂ ಸಹ ಬೆಳಿಗ್ಗೆ 5ಕ್ಕೆ ಬಂದು, ವ್ಯವಸ್ಥೆ ಗಮನಿಸುತ್ತೇವೆ. 32, 33, 34, 35 ಹಾಗೂ 36ನೇ ವಾರ್ಡ್ ಈ ಕೇಂದ್ರದ ವ್ಯಾಪ್ತಿಗೆ ಬರುತ್ತವೆ. ಸಹಸ್ರಾರು ಸಂಖ್ಯೆ ಜನ ಇದ್ದಾರೆ. ಮೊದಲು ಎಷ್ಟು ಲಸಿಕೆ ಕೊಡಲಾಗುತ್ತದೆಂಬ ಮಾಹಿತಿ ಕೊಡಿಸಿ. ನಮ್ಮ ಭಾಗದ ಸಮಸ್ಯೆ ನಮಗೆ ಗೊತ್ತಿದೆ. ವಾರ್ಡ್ ಮಟ್ಟದಲ್ಲಿ ಲಸಿಕೆ ಕಾರ್ಯ ಕೈಗೊಳ್ಳುವಂತೆ ಮನವಿ ಮಾಡಿದ್ದರೂ ಯಾವೊಬ್ಬ ಅಧಿಕಾರಿಗಳೂ ಸ್ಪಂದಿಸುತ್ತಿಲ್ಲ ಎಂದು ಉಮಾ ಪ್ರಕಾಶ್ ಕಿಡಿ ಕಾರಿದರು.

ತಕ್ಷಣವೇ ಸಚಿವ ಭೈರತಿ ಬಸವರಾಜ್ ಪಕ್ಕದಲ್ಲೇ ಇದ್ದ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರನ್ನೂ ತರಾಟೆಗೆ ತೆಗೆದುಕೊಂಡರು. ಅದು ಆರೋಗ್ಯ ಇಲಾಖೆ ಅಧಿಕಾರಿಗಳ ಕೆಲಸ ಎಂದು ಜಿಲ್ಲಾಧಿಕಾರಿಗಳು ಹೇಳಿದರು. ಅದರಿಂದ ಮತ್ತಷ್ಟು ಸಿಟ್ಟಾದ ಉಮಾ ಪ್ರಕಾಶ್, ಅವರಿವರ ಮೇಲೆ ಹೇಳುತ್ತಾ ಹೋದರೆ ಸಮಸ್ಯೆ ಬಗೆಹರಿಯದು.

### ಸಚಿವ ಭೈರತಿ ಅವರ ಮಾತಿಗೆ ಕಾಂಗ್ರೆಸ್ ಯುವ ಮುಖಂಡ, ಕಾರ್ಯಕರ್ತರ ಅಸಮಾಧಾನ

ಎಲ್ಲರಿಗೂ ಲಸಿಕೆ ಬೇಕೇ ಬೇಕು. ವಾರ್ಡ್ ಮಟ್ಟದಲ್ಲಿ ಲಸಿಕೆ ಕೊಡಲು ವ್ಯವಸ್ಥೆ ಮಾಡಿ ಎಂದು ಒತ್ತಾಯಿಸಿದರು. ಅದೇ ವೇಳೆ ಸಚಿವರ ರೇಗಾಟ ಗಮನಿಸಿದ ಕಾಂಗ್ರೆಸ್ ಯುವ ಮುಖಂಡ ಗಣೇಶ್ ಹುಲ್ಮನಿ ಧಾವಿಸಿ, ಉಮ್ಮಕ್ಕನವರ ಬಗ್ಗೆ ಹಾಗೆಲ್ಲಾ ಮಾತನಾಡಬೇಡಿ ಎಂದರು.

ಲಸಿಕೆ ಕಾರ್ಯ ವ್ಯವಸ್ಥಿತವಾಗಿ ನಡೆಯಲು ನಾವೆಲ್ಲರೂ ಪಕ್ಷಾತೀತವಾಗಿ ಕೆಲಸ ಮಾಡುತ್ತಿದ್ದೇವೆ. ಪೂರ್ವಾಪರ ಗೊತ್ತಿಲ್ಲದೇ ಹೀಗೆ ಜವಾಬ್ದಾರಿಯುತ ಸಚಿವರು ಮಾತನಾಡುವುದು ಸರಿಯಲ್ಲ. ನಮ್ಮ ಜಿಲ್ಲೆಯಲ್ಲೇ ಉಸ್ತುವಾರಿ ಸಚಿವರು ವಾಸ್ತವ್ಯ ಮಾಡಿದರೆ ಜಿಲ್ಲೆಯ ಸಮಸ್ಯೆ ಅರಿವಾಗುತ್ತದೆ ಎಂದು ಉಮಾಪ್ರಕಾಶ್ ಪರ ಗಣೇಶ್ ಹುಲ್ಮನಿ ಧ್ವನಿ ಎತ್ತಿದರು.

**ಮುಂದಿನ ವಾರ ದಿಢೀರ್ ಭೇಟಿ:** ಜಿಲ್ಲಾ ಸಚಿವರು, ಮುಂದಿನ ವಾರ ದಿಢೀರ್ ಭೇಟಿ ನೀಡುತ್ತೇನೆ. ಲಸಿಕೆ ವ್ಯವಸ್ಥೆ ಸರಿ ಹೋಗದಿದ್ದರೆ ನಿಮ್ಮ ಮೇಲೆ ಕ್ರಮ ಕೈಗೊಳ್ಳುವೆ. ಉಮಾ ಪ್ರಕಾಶ್ ಅವರೇ ಹೇಳಿದಂತೆ ವಾರ್ಡ್ ಮಟ್ಟದಲ್ಲಿ ಲಸಿಕೆ ಕಾರ್ಯ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗೆ ಸೂಚಿಸಿ, ತಮ್ಮ ವಾಹನದತ್ತ ಹೆಜ್ಜೆ ಹಾಕಿದರು.

ಮೇಯರ್ ಎಸ್.ಟಿ.ವೀರೇಶ್ ಮತ್ತು ಇತರರು ಸಚಿವರೊಂದಿಗೆ ಇದ್ದರು.

# ಸೋಂಕಿತರಿಗೆ ದಾಸೋಹ ವ್ಯವಸ್ಥೆ ಸಮಯೋಚಿತವಾದದ್ದು : ಜಿಲ್ಲಾ ಸಚಿವರ ಮೆಚ್ಚುಗೆ



ದಾವಣಗೆರೆ, ಜೂ. 1 - ನಗರದಲ್ಲಿ ಕಳೆದ 31 ದಿನಗಳಿಂದ ಕೊರೊನಾ ಸೋಂಕಿತರಿಗೆ ಪ್ರತಿದಿನ ಮೂರೂ ಹೊತ್ತು ಊಟದ ವ್ಯವಸ್ಥೆಯನ್ನು ಮಾಡುತ್ತಿರುವ ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯ ಯುವಕ ಸಂಘದ ಕಾರ್ಯ ಅತ್ಯಂತ ಸಮಯೋಚಿತವಾದದ್ದು ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಭೈರತಿ ಬಸವರಾಜ್ ಪ್ರಶಂಸೆ ವ್ಯಕ್ತಪಡಿಸಿದರು.

ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಈ ಕಾರ್ಯಕ್ಕೆ ಸಚಿವರು ಸರ್ಕಾರದ ಪರವಾಗಿ ಕೃತಜ್ಞತೆ ಅರ್ಪಿಸಿದರು.

ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪಕ್ಕೆ ಇಂದು ಭೇಟಿ ನೀಡಿದ ಅವರು, ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯ ಯುವಕ ಸಂಘದವರು ಕೊರೊನಾ ಸೋಂಕಿತರಿಗೆ ಮಾಡುತ್ತಿರುವ ಊಟದ ತಯಾರಿಯನ್ನು ವೀಕ್ಷಿಸಿ ಮಾತನಾಡಿದರು.

ತರಳಬಾಳು ಸೇವಾ ಸಮಿತಿಯ ಗೌರವಾ ಧ್ಯಕ್ಷ ಶಶಿಧರ್ ಹೆಮ್ಮನಬೇತೂರು ಮಾತನಾಡಿ, ಈ ಪುಣ್ಯದ ಕಾರ್ಯಕ್ಕೆ ಉದಾರವಾದ ಸಹಾಯ - ಸಹಕಾರ ಹರಿದುಬರುತ್ತಿದೆ. ಅವರೆಲ್ಲರನ್ನೂ ಕೃತಜ್ಞತಾಪೂರ್ವಕವಾಗಿ ಸ್ಮರಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ, ಮೇಯರ್ ಎಸ್.ಟಿ. ವೀರೇಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ, ಲೋಕಿಕೆರೆ ನಾಗರಾಜ್ ಅವರುಗಳು ಜಿಲ್ಲಾ ಉಸ್ತುವಾರಿ ಸಚಿವರಿಗೆ ಸಾಥ್ ನೀಡಿದರು.

ಈ ಸಂದರ್ಭದಲ್ಲಿ ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯ ಯುವಕ ಸಂಘದ ಪದಾಧಿಕಾರಿಗಳಾದ ಮಾಗನೂರು ಉಮೇಶ್ ಗೌಡ್ರು, ಕೊರಟಿಕೆರೆ ಶಿವಕುಮಾರ್, ಪ್ರಭು ಕಾವಲಹಳ್ಳಿ, ಶ್ರೀನಿವಾಸ್ ಮೆಳ್ಳೇಕಟ್ಟೆ, ಸತೀಶ್ ಸಿರಿಗೆರೆ, ಮತ್ತಿತರರಿದ್ದರು.

## ಪೆಟ್ರೋಲ್, ಡೀಸೆಲ್ ದರ 17ನೇ ಬಾರಿ ಏರಿಕೆ

ನವದೆಹಲಿ, ಜೂ. 1 – ಮಂಗಳವಾರ ಪೆಟ್ರೋಲ್ ದರದಲ್ಲಿ 26 ಪೈಸೆ ಹಾಗೂ ಡೀಸೆಲ್ ದರದಲ್ಲಿ 23 ಪೈಸೆ ಏರಿಕೆಯಾಗಿದೆ. ತಿಂಗಳಲ್ಲಿ 17ನೇ ಬಾರಿ ತೈಲ ಬೆಲೆ ಏರಿಕೆಯಾಗಿದೆ.

ರಾಜಸ್ಥಾನ, ಮಧ್ಯ ಪ್ರದೇಶ ಹಾಗೂ ಮಹಾರಾಷ್ಟ್ರಗಳ ಹಲವೆಡೆ ಪೆಟ್ರೋಲ್ ದರ ಈಗಾಲೇ 100 ರೂ.ಗಳ ಗಡಿ ದಾಟಿದೆ.

ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಪೆಟ್ರೋಲ್ ದರ 100ರ ಗಡಿ ದಾಟುವ ಹಂತದಲ್ಲಿದೆ.

## ಚೀನಾದಲ್ಲಿ ವ್ಯಕ್ತಿಗೆ ಹೆಚ್10ಎನ್3 ಹಕ್ಕಿ ಜ್ವರ

ಬೀಜಿಂಗ್, ಜೂ. 1 – ಚೀನಾದ ಪೂರ್ವ ಪ್ರಾಂತ್ಯದಲ್ಲಿರುವ ಜಿಯಾಂಗ್ಸು ಪ್ರಾಂತ್ಯದಲ್ಲಿ ಮೊದಲ ಬಾರಿಗೆ ವ್ಯಕ್ತಿಯೊಬ್ಬರಲ್ಲಿ ಹೆಚ್10ಎನ್3 ಹಕ್ಕಿ ಜ್ವರದ ಸೋಂಕು ಕಾಣಿಸಿಕೊಂಡಿದೆ ಎಂದು ಅಲ್ಲಿನ ರಾಷ್ಟ್ರೀಯ ಆರೋಗ್ಯ ಆಯೋಗ ತಿಳಿಸಿದೆ.

ಝೆಂಜಿಯಾಂಗ್ ನಗರದ 41 ವರ್ಷದ ವ್ಯಕ್ತಿಯಲ್ಲಿ ಸೋಂಕು ಕಾಣಿಸಿಕೊಂಡಿದೆ. ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಸಿ.ಜಿ.ಟಿ.ಎನ್. ಟಿವಿ ವರದಿ ಮಾಡಿದೆ.

ಈ ಸೋಂಕಿಗೆ ಹೆಚ್ಚು ಪ್ರಾಮುಖ್ಯತೆ ಇಲ್ಲ ಎಂದಿರುವ ಅಧಿಕಾರಿಗಳು, ಕೆಲವೊಮ್ಮೆ ಪೌಲ್ಟ್ರಿ ಫಾರಂನಿಂದ ಮನುಷ್ಯರಿಗೆ ಸೋಂಕು ಬರುತ್ತದೆ. ಇದು ಸಾಂಕ್ರಾಮಿಕವಾಗುವ ಸಾಧ್ಯತೆ ತೀರಾ ಕಡಿಮೆ ಎಂದು ಹೇಳಿದ್ದಾರೆ.

ಮೇ 28ರಂದು ವ್ಯಕ್ತಿಯಲ್ಲಿ ಹೆಚ್10ಎನ್3 ಹಕ್ಕಿ ಜ್ವರದ ಸೋಂಕು ಕಂಡು ಬಂದಿತ್ತು ಎಂದು ತಿಳಿಸಲಾಗಿದೆ. ಯಾವ ರೀತಿಯ ಸೋಂಕು ಬಂತು ಎಂಬ ಬಗ್ಗೆ ಹೇಳಿಕೆಯಲ್ಲಿ ವಿವರ ನೀಡಲಾಗಿಲ್ಲ. ಹೆಚ್10ಎನ್3 ಹಕ್ಕಿ ಜ್ವರದ ಸೋಂಕು ಮನುಷ್ಯರಿಗೆ ಬಂದ ಉದಾಹರಣೆ ಈ ಹಿಂದೆ ಇರಲಿಲ್ಲ. ಹಕ್ಕಿ ಜ್ವರದಲ್ಲಿ ಹೆಚ್10ಎನ್3 ಕಡಿಮೆ ತೀವ್ರತೆಯದ್ದಾಗಿದೆ. ಇದು ವ್ಯಾಪಕವಾಗಿ ಹರಡುವ ಸಾಧ್ಯತೆ ಕಡಿಮೆ ಇದೆ.

ಚೀನಾದಲ್ಲಿ ಹಕ್ಕಿ ಜ್ವರದ ಹಲವಾರು ರೂಪಾಂತರಿಗಳು ಕಂಡು ಬಂದಿವೆ. ಕೆಲವೊಮ್ಮೆ ಪೌಲ್ಟ್ರಿಯಲ್ಲಿ ಕಾರ್ಯ ನಿರ್ವಹಿಸುವವರಲ್ಲಿ ಸೋಂಕು ಕಂಡು ಬರುತ್ತದೆ.

## ಸೋಂಕು 54 ದಿನಗಳಲ್ಲೇ ಕಡಿಮೆ

ನವದೆಹಲಿ, ಜೂ. 1 – ದೇಶದಲ್ಲಿ ಮಂಗಳವಾರ 1.27 ಲಕ್ಷ ಕೊರೊನಾ ಪ್ರಕರಣಗಳು ಕಂಡು ಬಂದಿದ್ದು, ಇದು ಕಳೆದ 54 ದಿನಗಳಲ್ಲೇ ಅತಿ ಕಡಿಮೆಯಾಗಿದೆ. ಕೊರೊನಾ ಟೆಸ್ಟ್‌ಗಳಲ್ಲಿ ಪಾಸಿಟಿವ್ ಬರುವ ದರ ಶೇ.6.62ಕ್ಕೆ ಇಳಿದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಮಾಹಿತಿ ತಿಳಿಸಿದೆ.

ಇದೇ ದಿನ 2,795 ಸಾವುಗಳು ಸಂಭವಿಸಿವೆ. 35 ದಿನಗಳಲ್ಲಿ ಸಾವಿನ ಪ್ರಮಾಣ ಅತಿ ಕಡಿಮೆಯಾಗಿದೆ. ಸಕ್ರಿಯ ಪ್ರಕರಣಗಳು 43 ದಿನಗಳ ನಂತರ 20 ಲಕ್ಷಕ್ಕೂ ಕಡಿಮೆಯಾಗಿ 19.25 ಲಕ್ಷಕ್ಕೆ ತಲುಪಿದೆ. ಕಳೆದ ಎಂಟು ದಿನಗಳಿಂದ ಪಾಸಿಟಿವ್ ದರ ಶೇ.10ಕ್ಕಿಂತ ಕಡಿಮೆ ಇದೆ. ವಾರದ ಪಾಸಿಟಿವ್ ದರ ಶೇ.8.64 ಆಗಿದೆ ಎಂದು ಸಚಿವಾಲಯ ಹೇಳಿದೆ.


ಜನ್ಮದಿನದ ಹಾರ್ದಿಕ ಶುಭಾಶಯಗಳು





ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆಯ ರಿಯಲ್ ಎಸ್ಟೇಟ್ ಉದ್ಯಮಿಗಳೂ, ಬಡವರ ಬಂಧು, ದೀನ-ದಲಿತರ ಸಾಕಾರ ಮೂರ್ತಿ, ಸರ್ವ ಜನಾಂಗದ ಒಡನಾಡಿ, ಬುದ್ಧನಂತೆ ಶಾಂತಿಪ್ರಿಯ, ಬಸವಣ್ಣನವರಂತೆ ಕಾಯಕವೇ ಕೈಲಾಸ ಎಂದು ನಂಬಿರುವ ಹಾಗು ಮಾಜಿ ನಗರಸಭೆ ಸದಸ್ಯರೂ, ಕಾಂಗ್ರೆಸ್ ಮುಖಂಡರೂ ಆದ

ಶ್ರೀ ಶಾಮನೂರು ಎಸ್. ಬಸವರಾಜ್

ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

ಶುಭಾಶಯ ಕೋರುವವರು :

* ಪಿ.ಕೆ. ರಾಜೇಂದ್ರ ಹೆದ್ನೆ (ಎಪಿಎಂಸಿ ಮಾಜಿ ಉಪಾಧ್ಯಕ್ಷರು)
* ಚೇತನ್ ಕುಮಾರ್ ಹೆದ್ನೆ
* ಶ್ರೀಕಾಂತ್ ಹೆಚ್.ಎಸ್. ಹೆದ್ನೆ



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 24-5-2021ರಂದು ನಿಧನರಾದ ನಮ್ಮ ಭಾವನವರಾದ

ಶ್ರೀ ಸುರೇಶಪ್ಪ ಹೆಚ್. ದೊಡ್ಡಮನಿ

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಪ್ರಾರ್ಥಿಸುವ

✦ರವಿ ಎಸ್. ಬಾದಾಮಿ ✦ಸುರೇಶ್ ಎಸ್. ಬಾದಾಮಿ
✦ರಾಜು ಬಸಪ್ಪ ಬಾದಾಮಿ ✦ಮಂಜು ಸಂಕೊಳ್ಳಿ ✦ನಾಗರಾಜ್ ಲಕ್ಕಳ್ಳಿ



ನಿಧನ



"ಸಿಯಾ ನಿಲಯ" ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ ವಾಸಿ

ಶ್ರೀ ಧರ್ಮಾನಾಯ್ಕ್‌ರವರು

(80 ವರ್ಷ) ನಿವೃತ್ತ ಮುನ್ಸಿಪಲ್ ಕಮೀಷನರ್

ದಿನಾಂಕ : 01.06.2021ರ ಮಂಗಳವಾರ ಬೆಳಿಗ್ಗೆ 6.00 ಗಂಟೆಗೆ ನಿಧನರಾಗಿರುತ್ತಾರೆ. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ : 01.06.2021ರ ಮಂಗಳವಾರ ಸಂಜೆ 5.00 ಗಂಟೆಗೆ ರೇಖಲಗೆರೆ ತಾಂಡಾ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತ ಕುಟುಂಬದವರು :

ಧರ್ಮಪತ್ನಿ : ಶ್ರೀಮತಿ ಪ್ರತಿಭಾ ಹೆಚ್.ಆರ್
ಶ್ರೀ ಹೇಮಂತ್, ಶ್ರೀಮತಿ ಶೈಲಾ
ಶ್ರೀ ಸುಮಂತ್, ಶ್ರೀಮತಿ ಸೀತಾಲಕ್ಷ್ಮೀ
ಶ್ರೀಮತಿ ಕುಮದ್ವತಿ, ಶ್ರೀ ಸುರೇಶ್
ಮೊಮ್ಮಕ್ಕಳಾದ : ಮೋಹಿತಾ, ಅನುಷಾ, ಮೈತ್ರಿ, ದಾನವತಿ, ಶ್ರೀಮಾತ, ಪಾರ್ವತಿ ಹಾಗೂ ಬಂಧುಗಳು.



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 27.5.2021ರಂದು ನಿಧನರಾದ ನಮ್ಮ ಆತ್ಮೀಯ ಒಡನಾಡಿಗಳಾಗಿದ್ದ

ಶ್ರೀ ಐನಳ್ಳಿ ವಿಶ್ವನಾಥ್ (ವಿಶ್ವಣ್ಣ)

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಪ್ರಾರ್ಥಿಸುವ

✦ಸಂಗಮೇಶ್ ಎಲಿಗಾರ್ ✦ಎಸ್.ಕೆ. ಶ್ರೀಧರ್
✦ಡಾ।। ಮಲ್ಲಿಕಾರ್ಜುನ್ ✦ವೆಂಕಟೇಶ್ ಕಾಟೆ
✦ಗಣೇಶ ದಾಸಕರಿಯಪ್ಪ ✦ಬಂಡ್ರಿ ಷಣ್ಮುಖ
✦ನಲ್ಕುಂದ ಹಾಲೇಶ್ ✦ರಾಜು ಬಂಬೂಬಜಾರ್
✦ಬಸವರಾಜಯ್ಯ ಆನೆಕೊಂಡ ✦ಕಡತಿ ಅಂಜಿನಪ್ಪ

ಇಂಡಿಯನ್ ಕಾಫಿಬಾರ್ ಬಳಗ

ಹಳೇ ಬಸ್‌ಸ್ಟ್ಯಾಂಡ್ ಎದುರು, ದಾವಣಗೆರೆ.





ಭಾವಪೂರ್ಣ ಶ್ರದ್ಧಾಂಜಲಿ

ದಿ : 21-5-2021 ರಂದು ನಿಧನರಾದ ನಮ್ಮ ಪ್ರೀತಿಯ ಅಣ್ಣನವರಾದ

ಶ್ರೀ ಜೆ.ಎಸ್ ಜ್ಯೋತಿ

ನಿವೃತ್ತ ಪ್ರಾಂಶುಪಾಲರು, ನಳಂದ ಜ್ಯೂನಿಯರ್ ಕಾಲೇಜ್, ಜಗಳೂರು

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

ನೀವು ಮತ್ತೆ ಹುಟ್ಟಿ ಬರಲೆಂದು ಭಗವಂತಲ್ಲಿ ಪ್ರಾರ್ಥಿಸುತ್ತೇವೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte